ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 11-11-2016

# ಪತ್ರಿಕಾ ಆಮಂತ್ರಣ

1. ರೂಪಾಂತರ (ಒಂದು ಪರಿವರ್ತನಾ ಪಯಣ) ಕಾರ್ಯಕ್ರಮದ

ಉದ್ಘಾಟನೆ:
ಗೌರವಾನ್ವಿತ ನ್ಯಾಯಮೂರ್ತಿ ಸುಬ್ರೋ ಕಮಲ್ ಮುಖರ್ಜಿ,
ಮುಖ್ಯ ನ್ಯಾಯಾಧೀಶರು, ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯ,
ಗೌರವಾನ್ವಿತ ಅತಿಥಿಗಳು:
ಡಾ. ಜಿ. ಪರಮೇಶ್ವರ,
ಗೃಹ ಸಚಿವರು, ಕರ್ನಾಟಕ ಸರ್ಕಾರ
ದಿನಾಂಕ: 12-11-2016 ಶನಿವಾರ ಸಮಯ: ಸಂಜೆ 4-00 ಗಂಟೆಗೆ.
ಸ್ಥಳ: ಕೇಂದ್ರ ಕಾರಾಗೃಹ, ಪರಪ್ಪನ ಅಗ್ರಹಾರ, ಬೆಂಗಳೂರು.

ಸೂಚನೆ : ಈ ಕಾರ್ಯಕ್ರಮಕ್ಕೆ ಮಾಧ್ಯಮದವರನ್ನು ಕರೆದೊಯ್ಯಲು ಕಾರಾಗೃಹ ಇಲಾಖೆಯು ವಾಹನ ವ್ಯವಸ್ಥೆ ಮಾಡಿದ್ದು ವಾಹನವು ಅಂದು ಮಧ್ಯಾಹ್ನ 2-00 ಗಂಟೆಗೆ ನಗರದ ಕಬ್ಬನ್ ಉದ್ಯಾನವನದ ಪ್ರೆಸ್ ಕ್ಲಬ್ ಆವರಣದಿಂದ ನಿಗದಿತ ಸ್ಥಳದತ್ತ ತೆರಳಲಿದೆ.
ಸಂಪರ್ಕ : ಪರಮೇಶ್, ಮೊ ಸಂಖ್ಯೆ 9538347277.

2. ಮಕ್ಕಳ ಹಬ್ಬ – 2016 :

ಉದ್ಘಾಟನೆ: ಸಿದ್ದರಾಮಯ್ಯ,
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.
ಅಧ್ಯಕ್ಷತೆ: ಆರ್. ರೋಷನ್ ಬೇಗ್,
ನಗರಾಭಿವೃದ್ಧಿ ಮತ್ತು ಹಜ್ ಸಚಿವರು.
ದಿನಾಂಕ: 13-11-2016, ಭಾನುವಾರ, ಸಮಯ: ಬೆಳಿಗ್ಗೆ 11.00 ಗಂಟೆಗೆ
ಸ್ಥಳ: ಬ್ಯಾಂಡ್‌ಸ್ಟ್ಯಾಂಡ್, ಕಬ್ಬನ್ ಉದ್ಯಾನವನ, ಬೆಂಗಳೂರು.

3. ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ 2014-2015

ಉದ್ಘಾಟನೆ: ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಮುಖ್ಯ ಅತಿಥಿ: ಶ್ರೀ ಕೆ.ಜೆ. ಜಾರ್ಜ್, ಬೆಂಗಳೂರು ಅಭಿವೃದ್ಧಿ ಮತ್ತು ನಗರ . . . ಯೋಜನಾ ಸಚಿವರು

ಸ್ಥಳ: ಡಾ: ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ ಗಾಂಧೀ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಬಳ್ಳಾರಿ ರಸ್ತೆ, ಬೆಂಗಳೂರು

ಸಮಯ: 13-11-2016 ಭಾನುವಾರ ಸಂಜೆ 6-00 ಗಂಟೆಗೆ

4. ವಿಶ್ವ ಮಧುಮೇಹ ದಿನ ಮತ್ತು ವಿಶ್ವ ದೃಷ್ಟಿ ದಿನಾಚರಣೆ ಜಾಥಾ

ಉದ್ಘಾಟನೆ:

ಶ್ರೀ ಕೆ.ಆರ್. ರಮೇಶ್‌ಕುಮಾರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಹಾಗೂ ಡಾ: ಶರಣಪ್ರಕಾಶ್ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವರು

ಸ್ಥಳ: ಮಿಂಟೋ ಕಣ್ಣಿನ ಆಸ್ಪತ್ರೆ, ಬೆಂಗಳೂರು

ದಿನಾಂಕ: 14-11-2016 ರಂದು ಬೆಳಿಗ್ಗೆ 9-00 ಗಂಟೆಗೆ

5. ದಿವಂಗತ ಜವಾಹರ್ ಲಾಲ್ ನೆಹರುರವರ 127 ನೇ ಜನ್ಮದಿನ:

ಮಾಲಾರ್ಪಣೆ:

ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿನಾಂಕ: 14-11-2016, ಸೋಮವಾರ, ಸಮಯ ಬೆಳಿಗ್ಗೆ 9-30 ಗಂಟೆಗೆ

ಸ್ಥಳ: ವಿಧಾನಸೌಧ ಪಶ್ಚಿಮ ದಿಕ್ಕಿನಲ್ಲಿರುವ ಅವರ ಪ್ರತಿಮೆ ಅವರ ಭಾವಚಿತ್ರಕ್ಕೆ, ವಿಧಾನಸೌಧ, ಬೆಂಗಳೂರು.

6. ಮಕ್ಕಳ ಚಿತ್ರಕಲಾ ಶಿಬಿರ:

ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಮಕ್ಕಳ ಚಿತ್ರಕಲಾ ಶಿಬಿರ

ದಿ: 14-11-2016 ರಂದು ಬೆಳಿಗ್ಗೆ 10-00 ಗಂಟೆಗೆ

ಸ್ಥಳ: ಶಿಲ್ಪವನ, ರವೀಂದ್ರ ಕಲಾಕ್ಷೇತ್ರ ಆವರಣ, ಬೆಂಗಳೂರು

7. ಮಕ್ಕಳ ದಿನಾಚರಣೆ – 2016 :

ಉದ್ಘಾಟನೆ: ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

ಅಧ್ಯಕ್ಷತೆ: ಆರ್. ರೋಷನ್ ಬೇಗ್, ನಗರಾಭಿವೃದ್ಧಿ ಮತ್ತು ಹಜ್ ಸಚಿವರು.
ದಿನಾಂಕ: **14–11–2016**, ಸೋಮವಾರ, ಸಮಯ ಬೆಳಿಗ್ಗೆ **11.00** ಗಂಟೆಗೆ
ಸ್ಥಳ: ಬಾಲಭವನ ಆಡಿಟೋರಿಯಂ, ಕಬ್ಬನ್ ಉದ್ಯಾನವನ, ಬೆಂಗಳೂರು.

8. ಪತ್ರಿಕಾಗೋಷ್ಠಿ:
ಎಂ.ಆರ್. ವೆಂಕಟೇಶ್, ಅಧ್ಯಕ್ಷರು
ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ,
ಬೆಂಗಳೂರು
ದಿನಾಂಕ: **14–11–2016**, ಸೋಮವಾರ, ಸಮಯ ಮಧ್ಯಾಹ್ನ **12–30** ಗಂಟೆಗೆ
ಸ್ಥಳ: ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ,
ಸಂಪಂಗಿರಾಮನಗರ ಪೊಲೀಸ್ ಠಾಣೆ ಎದರು,
ಬೆಂಗಳೂರು.

## ಪತ್ರಿಕಾ ಪ್ರಕಟಣೆ

# ನಗರದಲ್ಲಿ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭ

ಬೆಂಗಳೂರು, ನವೆಂಬರ್ 11 (ಕರ್ನಾಟಕ ವಾರ್ತೆ)

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖಾವತಿಯಿಂದ **2014 – 2015** ನೇ ಸಾಲಿನ ರಾಜ್ಯ ಚಲನಚಿತ್ರ ಪಶಸ್ತಿ ಪ್ರದಾನ ಸಮಾರಂಭವನ್ನು ನವೆಂಬರ್ **13** ರ ಭಾನುವಾರದಂದು ಸಂಜೆ **6–00** ಗಂಟೆಗೆ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರ ರಾಷ್ಟ್ರೀಯ ಸಮಾವೇಶ ಭವನ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, (ಜಿಕೆವಿಕೆ) ಬೆಂಗಳೂರು ಇಲ್ಲಿ ಹಮ್ಮಿಕೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂದು ಪ್ರಶಸ್ತಿ ಪ್ರದಾನ ಮಾಡುವರು. ಕೇಂದ್ರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವ ಡಿ.ವಿ. ಸದಾನಂದ ಗೌಡ ಅವರು ಗೌರವ ಉಪಸ್ಥಿತಿಯಾಗಿ ಪಾಲ್ಗೊಳ್ಳುವರು. ಕೃಷಿ ಸಚಿವ ಕೃಷ್ಣ ಭೈರೇಗೌಡ ಸಮಾರಂಭದ ಅಧ್ಯಕ್ಷತೆಯನ್ನು ಅವರು ವಹಿಸುವರು.

ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವ ಕೆ.ಜೆ. ಜಾರ್ಜ್, ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ಮಹಾಪೌರರಾದ ಶ್ರೀಮತಿ ಜಿ. ಪದ್ಮಾವತಿ, ವಿಧಾನ

ಪರಿಷ್ ಸದಸ್ಯ ಹಾಗೂ ಮುಖ್ಯಮಂತ್ರಿಯವರ ಸಂಸದೀಯ ಕಾರ್ಯದರ್ಶಿ ಕೆ. ಗೋವಿಂದರಾಜ್, ವಿಧಾನ ಪರಿಷತ್ ಸದಸ್ಯರುಗಳಾದ ಬಿ.ಜೆ. ಪುಟ್ಟಸ್ವಾಮಿ, ಪುಟ್ಟಣ್ಣ ಹಾಗೂ ಬಿ.ಎಸ್. ಸುರೇಶ್ ಅವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು.

ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಎಸ್. ವಿ. ರಾಜೇಂದ್ರಸಿಂಗ್ ಬಾಬು, ಶ್ರೀ ಕಂಠೀರವಣ ಸ್ಟುಡಿಯೋಸ್ ನಿಯಮಿತ ಅಧ್ಯಕ್ಷ ಶ್ರೀಮತಿ ಅಶ್ವಿನಿ ಕೃಷ್ಣಮೂರ್ತಿ ಹಾಗೂ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಸಾ.ರಾ. ಗೋವಿಂದು ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು.

ಈ ಸಂದರ್ಭದಲ್ಲಿ ಡಾ. ಶಮಿತಾ ಮಲ್ನಾಡ್ ಅವರು ಚಲನಚಿತ್ರ ಗೀತೆಗಳನ್ನಾಧರಿಸಿದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಎನ್.ಆರ್. ವಿಶುಕುಮಾರ್ ತಿಳಿಸಿದ್ದಾರೆ.

ಎಸ್ಎಂ::ಜಿಪಿಆರ್.

## 279 ನ್ಯಾಯಬೆಲೆ ಅಂಗಡಿಗಳ ಪ್ರಾಧಿಕರಣ ಅಮಾನತ್ತು

ಬೆಂಗಳೂರು, ನವೆಂಬರ್ 11 (ಕರ್ನಾಟಕ ವಾರ್ತೆ)

ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶದ 5 ವಲಯ ಕಚೇರಿಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ನ್ಯಾಯಬೆಲೆ ಅಂಗಡಿ ಮಾಲೀಕರು ಖಾಸಗಿ ಸೇವಾ ಕೇಂದ್ರಗಳವರೊಂದಿಗೆ ಕೈಜೋಡಿಸಿ ಒಂದೇ ಆಧಾರ್ ನಂಬರ್ ಬಳಸಿ ಹಲವಾರು ಪಡಿತರ ಕೂಪನ್‌ಗಳನ್ನು ಮುದ್ರಿಸಿ ಪಡಿತರ ಪದಾರ್ಥಗಳನ್ನು ದುರುಪಯೋಗಪಡಿಸಿಕೊಂಡಿರುವ ಹಿನ್ನೆಲೆಯಲ್ಲಿ 279 ನ್ಯಾಯಬೆಲೆ ಅಂಗಡಿಗಳ ಪ್ರಾಧಿಕರಣವನ್ನು ಅಮಾನತ್ತುಪಡಿಸಲಾಗಿರುತ್ತದೆ.

ಅಮಾನತ್ತುಪಡಿಸಲಾದ ನ್ಯಾಯಬೆಲೆ ಅಂಗಡಿಗಳಿಗೆ ಸೇರಿದ ಪಡಿತರ ಚೀಟಿಗಳಿಗೆ ಪಡಿತರವನ್ನು ಪಡೆಯಲು ಪರ್ಯಾಯ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಅಲ್ಲದೇ, ಈಗಾಗಲೇ (Portability) ವ್ಯವಸ್ಥೆ ಇರುವುದರಿಂದ ಕಾರ್ಡುದಾರರು ಸಮೀಪದ ಯಾವುದೇ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಪಡೆಯಬಹುದಾಗಿರುತ್ತದೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಪ್ರಕಟಣೆ ತಿಳಿಸಿದೆ.

ಎಸ್ಎಂ::ಜಿಪಿಆರ್.

## ಮಕ್ಕಳ ದಿನಾಚರಣೆ – 2016

ಬೆಂಗಳೂರು, ನವೆಂಬರ್ 11 (ಕರ್ನಾಟಕ ವಾರ್ತೆ)

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಮಕ್ಕಳ ದಿನಾಚರಣೆಯ ಅಂಗವಾಗಿ ನವೆಂಬರ್ 13 ಮತ್ತು 14 ರಂದು ನಗರದ ಕಬ್ಬನ್ ಪಾರ್ಕ್ ಹಾಗೂ ಬಾಲ ಭವನದಲ್ಲಿ ವಿವಿಧ ರೀತಿಯ ಸಾಂಸ್ಕೃತಿಕ ಹಾಗೂ ಪ್ರದರ್ಶನವನ್ನು ಮಕ್ಕಳಿಗಾಗಿ ಹಮ್ಮಿಕೊಂಡಿದೆ.**

**ಇವುಗಳಲ್ಲಿ ಜಾನಪದ ಕಲಾ ಪ್ರದರ್ಶನ, ಸಮೂಹ ನೃತ್ಯ, ಮ್ಯಾಜಿಕ್ ಷೋ, ಹಾಸ್ಯ ಪ್ರದರ್ಶನ, ಬೊಂಬೆ ವೈಭವ, ಯಕ್ಷಗಾನ ಹಾಗೂ ಸೂತ್ರದ ಗೊಂಬೆ ಪ್ರದರ್ಶನ ಹಮ್ಮಿಕೊಂಡಿದೆ.**

**ಗ್ರಾಮೀಣ ಕ್ರೀಡೆ ಹಾಗೂ ಸಾಹಸ ಕ್ರೀಡೆಗಳಾದ ಕುಸ್ತಿ, ಮಲ್ಲ ಕಂಬ, ಗಿಲ್ಲಿ ದಾಂಡು, ಚೌಕಾಬಾರ, ಲಗೋರಿ, ಕುಂಟ ಬಿಲ್ಲೆ, ಚಿತ್ರಕಲೆ, ಬುಗುರಿ, ಪರಿಸರ, ಅರಣ್ಯ, ಸಾಹಿತ್ಯ ಹಾಗೂ ಕ್ರಿಯಾತ್ಮಕ ವೈಜ್ಞಾನಿಕ ಪ್ರದರ್ಶನ, ಮೆಟ್ರೋ, ಹೆಚ್‌ಎಎಲ್ ಹಾಗೂ ಇಸ್ರೋ ವತಿಯಿಂದ ಪ್ರದರ್ಶನ, ಏರ್‌ಕ್ರಾಫ್ಟ್ ಮಾದರಿಗಳ ಪ್ರದರ್ಶನ, ಚಿತ್ರಕಲೆ, ವೇಷಭೂಷಣ, ಆರೋಗ್ಯವಂತ ಮಗು ಸ್ಪರ್ಧೆಗಳು, ಜೇಡಿ ಮಣ್ಣಿನ ಆಕೃತಿಗಳ ಪ್ರಾತ್ಯಕ್ಷಿಕೆ ಮತ್ತು ಪ್ರದರ್ಶನ ಹಾಗೂ ವೆಂಕಟಪ್ಪ ಆರ್ಟ್ ಗ್ಯಾಲರಿ ಮತ್ತು ಅಕ್ವೇರಿಯಂಗೆ ಉಚಿತ ಪ್ರವೇಶ ಎಂದು ಪ್ರಕಟಣೆ ತಿಳಿಸಿದೆ.**

ಎಸ್‌ಎಂ::ಜಿಪಿಆರ್

## ಅವಧಿಪೂರ್ವ ಬಿಡುಗಡೆಗೆ ಕೈದಿಗಳ "ರೂಪಾಂತರ"

ಬೆಂಗಳೂರು, ನವೆಂಬರ್ 11 (ಕರ್ನಾಟಕ ವಾರ್ತೆ)

ದಿನಾಂಕ ನವೆಂಬರ್ 12 ರಂದು ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಜೀವಾವಧಿ ಶಿಕ್ಷೆಗೆ ಒಳಪಟ್ಟಿರುವ ಅಪರಾಧಿಗಳ ಅವಧಿಪೂರ್ವ ಬಿಡುಗಡೆಗಾಗಿ ವಿಶೇಷ ಶಿಬಿರ ನಡೆಯಲಿದೆ.

ಈ ಶಿಬಿರದಲ್ಲಿ, ಬಿಡುಗಡೆಗೊಳ್ಳುವ ಜೀವಾವಧಿ ಶಿಕ್ಷೆಗೆ ಒಳಪಟ್ಟ ಅಪರಾಧಿಗಳನ್ನು ಭವಿಷ್ಯದ ಜೀವನಕ್ಕೆ ಸಜ್ಜುಗೊಳಿಸಲು ಹಾಗೂ ಬಂಧೀಖಾನೆಯ ಗೋಡೆಗಳಿಂದಾಚೆಗಿನ ಬಾಹ್ಯ ಪ್ರಪಂಚದ ಜೀವನಕ್ಕೆ ಹೊಂದಾಣಿಕೆ ಮಾಡಿಕೊಳ್ಳಲು ಅಣಿಗೊಳಿಸಲಾಗುವುದು.

ಕರ್ನಾಟಕದಲ್ಲೇ ಅಲ್ಲದೆ ಇಡೀ ದೇಶದಲ್ಲೇ ಕಾರಾಗೃಹವಾಸದ ಇತಿಹಾಸದಲ್ಲೇ ಇದೊಂದು ಪ್ರಥಮ ಪ್ರಯತ್ನ. ಅಪರಾಧಿಗಳು ಕಂಡಿರುವ ಕಾರಾಗೃಹವಾಸದ ಜೀವನದಿಂದ ರೂಪಾಂತರಗೊಳಿಸಿ ಮುಂದೆ ಸಾಗಲು ಹಾಗೂ ಉತ್ತಮ ಜೀವನವನ್ನು ನಡೆಸಲು ಪರಿಪೂರ್ಣವಾಗಿ ಬದುಕಲು ಸಜ್ಜುಗೊಳಿಸುವ ಉದ್ದೇಶದಿಂದ ಈ ಶಿಬಿರವನ್ನು ಏರ್ಪಡಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ವೈಯುಕ್ತಿಕ ಚಿತ್ರಣ, ಬಿಡುಗಡೆಗಾಗಿ ದೈಹಿಕ

ಸಿದ್ದತೆ, ಮಾನಸಿಕ ಹಾಗೂ ಭಾವನಾತ್ಮಕ ಸಿದ್ದತೆ, ಸಾಮಾಜಿಕ ಸಿದ್ದತೆ, ಆದ್ಯಾತ್ಮಿಕ ಸಿದ್ದತೆ ಹಾಗೂ ಅನುಪಾಲನೆ ನೆರವು ಎಂಬ ಹಂತಗಳನ್ನು ಒಳಗೊಂಡಿದೆ.

ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ನ್ಯಾಯಮೂರ್ತಿ ಶ್ರೀ ಸುಬ್ರೋ ಕಮಲ್ ಮುಖರ್ಜಿ ಅವರು ನವೆಂಬರ್ 12 ರಂದು ಸಂಜೆ 4–00 ಗಂಟೆಗೆ ಶಿಬಿರವನ್ನು ಉದ್ಘಾಟಿವರು. ಗೌರವಾನ್ವಿತ ಅತಿಥಿಗಳಾಗಿ ಕರ್ನಾಟಕ ಸರ್ಕಾರದ ಗೃಹ ಸಚಿವ ಡಾ: ಜಿ. ಪರಮೇಶ್ವರ್ ಅವರು ಪಾಲ್ಗೊಳ್ಳುವರು ಎಂದು ಕರ್ನಾಟಕ ಕಾರಾಗೃಹಗಳ ಮಹಾ ನಿರೀಕ್ಷಕ ಹೆಚ್.ಎನ್. ಸತ್ಯನಾರಾಯಣ ರಾವ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

ಬೆಂಗಳೂರು, ನವೆಂಬರ್ 11 (ಕರ್ನಾಟಕ ವಾರ್ತೆ)

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. **ದಿನಾಂಕ:13–11–2016ರ** ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ **ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಉದಯರಾಗ"** ಎಂಬ ಶೀರ್ಷಿಕೆಯಡಿ ಶ್ರೀ ಮಹಾಂತಪ್ಪ ಹಾಸನ ಮತ್ತು ತಂಡದವರಿಂದ ಜನಪದ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ

2) ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ **ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.

3) ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

4) **ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆವತಿಯಿಂದ ದಿನಾಂಕ:13-11-2016 ರಂದು ಮತ್ತು ದಿನಾಂಕ:14-11-2016 ರಂದು ಮಕ್ಕಳ ದಿನಾಚರಣೆ ಅಂಗವಾಗಿ ಕಬ್ಬನ್ ಉದ್ಯಾನವನದಲ್ಲಿ ಮಕ್ಕಳ ಹಬ್ಬ ಹಾಗೂ ಪುಷ್ಪ ಪ್ರದರ್ಶನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದು, ಈ ಸಂಬಂಧ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಇನ್ನಿತರೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.**

**ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:**

**I.ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ**

- ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ **ಯೂನಿವರ್ಸ್ ಆರ್ಟ್ ಫೌಂಡೇಶನ್ ಸಂಸ್ಥೆಯ** ಸಹಯೋಗದೊಂದಿಗೆ ಶ್ರೀ. ನಿಧಾಗ ಕರುನಾಡ್‌ರವರಿಂದ **ಭರತನಾಟ್ಯ ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.

- ಬೆಳಿಗ್ಗೆ 8.00 ಗಂಟೆಯಿಂದ 9.00 ಗಂಟೆಯವರೆಗೆ **ಶ್ರೀವಾಣಿ ವಿದ್ಯಾ ಕೇಂದ್ರ , ಮಾಗಡಿ ರೋಡ್, ಬೆಂಗಳೂರು ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ನೃತ್ಯ ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.

**II.ಸ್ಥಳ: ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಹತ್ತಿರ**

- **ಬೆಳಿಗ್ಗೆ 6.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯವರೆಗೆ** ವಿದ್ಯಾರಣ್ಯ **ಸಂಸ್ಥೆಯು ನಡೆಸುತ್ತಿರುವ ವೃದ್ಧಾಶ್ರಮ ಫಲಾನುಭವಿಗಳು ಉತ್ಪಾದಿಸಿದ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.

- **ಬೆಳಿಗ್ಗೆ 7.00 ರಿಂದ ಬೆಳಿಗ್ಗೆ 10.00** ಗಂಟೆಯವರೆಗೆ **ಯೋಗ ಪ್ರಾಣ ವಿದ್ಯಾ ಸಂಸ್ಥೆಯ Soham Healing Center,** ಆರ್.ಟಿ.ನಗರ, ಬೆಂಗಳೂರು ರವರ ವತಿಯಿಂದ **ಪ್ರಾಣ ಚಿಕಿತ್ಸೆ** ನೀಡುವ ಕಾರ್ಯಕ್ರಮವನ್ನು ಉಚಿತವಾಗಿ ಏರ್ಪಡಿಸಲಾಗಿದೆ.

## ನವೆಂಬರ್ 13ರಂದು ಕಬ್ಬನ್ ಪಾರ್ಕ್‌ನಲ್ಲಿ 'ಮಕ್ಕಳ ಹಬ್ಬ' – ಸಚಿವೆ ಉಮಾಶ್ರೀ

**<u>ನವೆಂಬರ್ 14ರಂದು ಕೆಳದಿ ಚನ್ನಮ್ಮ ಶೌರ್ಯ ಪ್ರಶಸ್ತಿ ಹಾಗೂ ಹೊಯ್ಸಳ ಶೌರ್ಯ ಪ್ರಶಸ್ತಿ ಪ್ರದಾನ</u>**

ನವೆಂಬರ್ 11, ಬೆಂಗಳೂರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನಗರದ ಕಬ್ಬನ್ ಪಾರ್ಕ್‌ನಲ್ಲಿ ಚಿಣ್ಣರಿಗಾಗಿ ವರ್ಣರಂಜಿತವಾದ ಮಕ್ಕಳ ಹಬ್ಬವನ್ನು ಆಯೋಜಿಸಲಾಗಿದೆ. ಅಲ್ಲದೆ, ನವೆಂಬರ್ 14ರಂದು ಹೊಯ್ಸಳ ಮತ್ತು ಕೆಳದಿ ಚನ್ನಮ್ಮ ಶೌರ್ಯ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವೆ ಉಮಾಶ್ರೀ ಹೇಳಿದ್ದಾರೆ.

ಕಳೆದ ವರ್ಷ ಮಕ್ಕಳ ಹಬ್ಬವನ್ನು ಮೊದಲ ಬಾರಿಗೆ ಆಯೋಜಿಸಲಾಗಿತ್ತು. ಇದನ್ನು ಕಬ್ಬನ್ ಪಾರ್ಕ್‌ನಲ್ಲಿರುವ ಬಾಲಭವನ ಹಾಗೂ ಬ್ಯಾಂಡ್‌ಸ್ಟ್ಯಾಂಡ್ ಸೇರಿದಂತೆ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಅಕಾಡೆಮಿಗಳ ಸಹಯೋಗದೊಂದಿಗೆ ಆಯೋಜಿಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

**"ಮಕ್ಕಳ ಹಬ್ಬದ"** ಕಾರ್ಯಕ್ರಮವನ್ನು ಮಾನ್ಯ **ಮುಖ್ಯಮಂತ್ರಿಗಳು** ದಿನಾಂಕ: 13-11-2016ರಂದು ಕಬ್ಬನ್ ಉದ್ಯಾನವನದಲ್ಲಿ ಉದ್ಘಾಟಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಬಾಲಮಂದಿರಗಳಲ್ಲಿ ಮಕ್ಕಳ ಪುನರ್ವಸತಿಗಾಗಿ ಇಲಾಖೆಯು ಕೈಗೊಂಡಿರುವ ದಿಟ್ಟ ಹೆಜ್ಜೆಯ ಯಶಸ್ಸಿನ ಕಥೆಗಳ ಸಂಕಲನ **"ಅಂತಃಕರಣ"** ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಧಾರವಾಡ ದಿಂದ ರಚಿತವಾದ **"ನನ್ನ ಕುರಿತು ನಾನೇ ಅರಿತಾಗ ಬಾಲ್ಯ ಸುಂದರ"** ಪುಸ್ತಕಗಳನ್ನು ಬಿಡುಗಡೆಗೊಳಿಸಲಾಗುತ್ತದೆ. ಮಕ್ಕಳ ಹಬ್ಬ ಕಾರ್ಯಕ್ರಮದಲ್ಲಿ ಜಾನಪದ ಕಲಾ ಪ್ರದರ್ಶನ, ಸಮೂಹ ನೃತ್ಯ, ಮ್ಯಾಜಿಕ್ ಶೋ, ಹಾಸ್ಯ ಪ್ರದರ್ಶನ, ಬೊಂಬೆ ವೈಭವ, ಯಕ್ಷಗಾನ ಹಾಗೂ ಸೂತ್ರದ ಗೊಂಬೆ ಪ್ರದರ್ಶನ ಏರ್ಪಡಿಸಲಾಗಿದೆ. ಗ್ರಾಮೀಣ ಕ್ರೀಡೆಗಳು ಹಾಗೂ ಸಾಹಸ ಕ್ರೀಡೆ ಗಳಾದ, ಕುಸ್ತಿ, ಗಿಲ್ಲಿ ದಾಂಡು, ಲಗೋರಿ, ಚಿತ್ರಕಲೆ, ಮಲ್ಲಕಂಬ, ಚೌಕಬಾರ, ಕುಂಟೆಬಿಲ್ಲೆ, ಬುಗುರಿ ಮುಂತಾದ ಕ್ರೀಡೆಗಳನ್ನು ಏರ್ಪಡಿಸಲಾಗಿದೆ. ಇದರ ಜೊತೆಗೆ ಪರಿಸರ, ಅರಣ್ಯ, ಸಾಹಿತ್ಯ ಹಾಗೂ ಕ್ರಿಯಾತ್ಮಾಕ ವೈಜ್ಞಾನಿಕ ಪ್ರದರ್ಶನ, ಮೆಟ್ರೋ, ಹೆಚ್‌ಎಎಲ್ ಹಾಗೂ ಇಸ್ರೋ ವತಿಯಿಂದ ಪ್ರದರ್ಶನ, ಏರ್ ಕ್ರಾಫ್ಟ್ ಮಾದರಿಗಳ ಪ್ರದರ್ಶನ, ವಿವಿಧ ಇಲಾಖೆಗಳ ಮಾಹಿತಿ ಪ್ರದರ್ಶನ ಮಳಿಗೆಗಳು, ಚಿತ್ರಕಲೆ, ವೇಷಭೂಷಣ, ಆರೋಗ್ಯವಂತ ಮಗು ಸ್ಪರ್ಧೆಗಳು, ಜೇಡಿ ಮಣ್ಣಿನ ಆಕೃತಿಗಳ ಪ್ರಾತ್ಯಕ್ಷಿಕೆ ಮತ್ತು ಪ್ರದರ್ಶನ ಏರ್ಪಡಿಸಲಾಗಿದೆ. ವಿವಿಧ ಜಿಲ್ಲೆಗಳ ಬಾಲಕಿಯರ ಬಾಲಮಂದಿರ ಮತ್ತು ಬಾಲಕರ ಬಾಲಮಂದಿರದ ಮಕ್ಕಳು ಈ ಎಲ್ಲಾ ಕಾರ್ಯಕ್ರದಲ್ಲಿ ಭಾಗವಹಿಸಲಿದ್ದಾರೆ.

ಮಕ್ಕಳ ಓಡಾಟಕ್ಕೆ ಮೈಸೂರು ಟಾಂಗಗಾಡಿ ವ್ಯವಸ್ಥೆ ಮಾಡಲಾಗಿದೆ. ಸ್ತ್ರೀಶಕ್ತಿ ಸಂಘಗಳು ಮತ್ತು ಇತರೆ ಇಲಾಖೆ ವತಿಯಿಂದ ಮಕ್ಕಳ ಉತ್ಪನ್ನಗಳನ್ನು ಮತ್ತು ಮಕ್ಕಳಿಗೋಸ್ಕರ ಇರುವ ವಿವಿಧ ಕಾರ್ಯಕ್ರಮಗಳ ಬಗ್ಗೆ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿದೆ.

ದಿನಾಂಕ:14.11.2016ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ಮುಖ್ಯಮಂತ್ರಿಯವರು **ಮಕ್ಕಳ ದಿನಾಚರಣೆ**ಯ ಕಾರ್ಯಕ್ರಮವನ್ನು ಜವಾಹರ ಬಾಲಭವನ ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿ ಉದ್ಘಾಟಿಸಲಿದ್ದಾರೆ ಹಾಗೂ ಮಕ್ಕಳ ದಿನಾಚರಣೆ ಅಂಗವಾಗಿ ರಾಜ್ಯದ ಬಾಲಮಂದಿರದ ಮಕ್ಕಳು ರಚಿಸಿರುವ "ಸಂಕಲ್ಪ" ಕಥಾಸಂಕಲನವನ್ನು ಬಿಡುಗಡೆಗೊಳಿಸಲಿದ್ದಾರೆ. ಈ ಸಂದರ್ಭದಲ್ಲಿ ಕೆಳಕಂಡ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತದೆ.

**ಧೈರ್ಯ ಸಾಹಸ ಪ್ರದರ್ಶಿಸಿದ ಮಕ್ಕಳಿಗೆ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಗಳು**

ಧೈರ್ಯ ಸಾಹಸ ಪ್ರದರ್ಶಿಸಿ, ಸಮಯ ಪ್ರಜ್ಞೆಯಿಂದ ಇತರರ ಪ್ರಾಣವನ್ನು ಅಪಾಯದಿಂದ ರಕ್ಷಿಸಿದಂತಹ ಮಕ್ಕಳಿಗೆ ಶೌರ್ಯ ಪ್ರಶಸ್ತಿಯನ್ನು ನೀಡಲಾಗುತ್ತದೆ. ಈ ಮಕ್ಕಳಿಗೆ ರೂ.10,000/- ನಗದು ಬಹುಮಾನ, ಪ್ರಶಸ್ತಿ ಪತ್ರ, ನೆನೆಪಿನ ಕಾಣಿಕೆಯನ್ನು ನೀಡಲಾಗುತ್ತದೆ. 2016-17ನೇ ಸಾಲಿಗೆ ಈ ಕೆಳಕಂಡ ಮಕ್ಕಳಿಗೆ ಹೊಯ್ಸಳ ಶೌರ್ಯ ಪ್ರಶಸ್ತಿ ನೀಡಿ ಗೌರವಿಸಲಾಗುವುದು.

| | ಹೆಸರು ಮತ್ತು ವಿಳಾಸ | ಪ್ರಕರಣದ ವಿವರ |
|---|---|---|
| | ಮಾ॥ ಚಿರಂತ್ ಡಿ.ಆರ್.,<br>ಬಿನ್.ರಂಗಸ್ವಾಮಿ ಡಿ.ಎಚ್.,<br>ಅಮಟೆಕೊಪ್ಪ,<br>ಶಿಕಾರಿಪುರ,<br>ಶಿವಮೊಗ್ಗ ಜಿಲ್ಲೆ.<br>ಜನ್ಮ ದಿನಾಂಕ:19-08-2002<br>(14 ವರ್ಷ) 9ನೇ ತರಗತಿ | ಮಾ॥ ಚಿರಂತ್ ಡಿ.ಆರ್, ಇವರು ದಿನಾಂಕ: 24.11.2015 ರಂದು ಶಾಲಾ ಮಕ್ಕಳನ್ನು ಕರೆದೊಯ್ಯುತ್ತಿದ್ದ ವಾಹನದ ಚಾಲಕನ ನಿಯಂತ್ರಣ ತಪ್ಪಿ ಕೆರೆಯ ಹತ್ತಿರಕ್ಕೆ ಉರುಳಿದ ವೇಳೆಯಲ್ಲಿ ಅದೇ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಈ ಬಾಲಕ ಬಸ್ಸಿನ ಗಾಜು ಒಡೆದು ಮಕ್ಕಳನ್ನು ಹೊರಗೆ ಸಾಗಿಸಿ ಧೈರ್ಯ ಸಾಹಸ ಪ್ರದರ್ಶಿಸಿ, ಸಂಭವಿಸಬಹುದಾದ ಅನಾಹುತವನ್ನು ತಪ್ಪಿಸಿರುತ್ತಾರೆ. |
| | ಮಾ॥ ನಿತಿನ್ ಹೆಚ್.ಎ,<br>ತಂದೆ ಹೆಚ್.ಕೆ. ಅಯ್ಯಣ್ಣ,<br>ಅರಮೇರಿ ಗ್ರಾಮ ಮತ್ತು ಅಂಚೆ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ<br>28.06.2002 (14 ವರ್ಷ)<br>9ನೇ ತರಗತಿ | ಮಾ॥ ನಿತಿನ್ ಹೆಚ್.ಎ, ಇವರು ದಿನಾಂಕ: 17.07.2016 ರಂದು ಕೆಸರು ಗದ್ದೆ ಕಾಲುಚೆಂಡು ಕ್ರೀಡಾಕೂಟಕ್ಕೆ ತೆರಳಿದ್ದ ಸಮಯದಲ್ಲಿ ಕಾಲುಜಾರಿ ಕೆರೆಗೆ ಬಿದ್ದು ಮುಳುಗುತ್ತಿದ್ದ ಸೂಫಿಯಾನ್ ಎಂಬ ಬಾಲಕನನ್ನು ಕೆರೆಗೆ ಇಳಿದು ಮೇಲಕ್ಕೆತ್ತಿ ರಕ್ಷಿಸಿ ಸಂಭವಿಸಬಹುದಾದ ಅನಾಹುತದಿಂದ ಪಾರು ಮಾಡಿರುತ್ತಾರೆ. |
| | ಮಾ॥ಶ್ರೇಯಸ್ ಎನ್ ರಾವ್,<br>ತಂದೆ ಡಾ॥ ನಾಗೇಶ್‌ರಾವ್, | ಮಾ॥ಶ್ರೇಯಸ್ ಎನ್ ರಾವ್, ಇವರು ದಿನಾಂಕ:06.06.2016ರಂದು ಶಾಲಾ ಮಕ್ಕಳನ್ನು ಕರೆದೊಯ್ಯುತ್ತಿದ್ದ ವಾಹನದಲ್ಲಿ ಆಕಸ್ಮಿಕವಾಗಿ ಬೆಂಕಿ |

| | | |
|---|---|---|
| | #56/2, ಕೆ.ಸಿ.ನಗರ, ಮೈಸೂರು–570 011 ಮೈಸೂರು ಜಿಲ್ಲೆ. ಜನ್ಮ ದಿನಾಂಕ: 21.11.2001 (14 ವರ್ಷ) 10ನೇ ತರಗತಿ | ಹೊತ್ತಿಕೊಂಡಿದ್ದ ವೇಳೆಯಲ್ಲಿ ಅದೇ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಈ ಬಾಲಕ ಬಸ್ಸಿನ ತುರ್ತು ನಿರ್ಗಮನ ದ್ವಾರವನ್ನು ತೆರೆದು ಹೊರಗೆ ಜಿಗಿದು ಹಲವಾರು ಮಕ್ಕಳನ್ನು ಬಸ್ಸಿನಿಂದ ಹೊರಗಿಳಿಸಿ ಪ್ರಾಣ ರಕ್ಷಣೆ ಮಾಡಿ ಧೈರ್ಯ ಸಾಹಸ ಪ್ರದರ್ಶಿಸಿ, ಸಂಭವಿಸಬಹುದಾದ ಅನಾಹುತವನ್ನು ತಪ್ಪಿಸಿರುತ್ತಾರೆ. |
| | ಮಾ॥ ಜಿ.ಎಂ. ಶಶಿಕುಮಾರ್ ಬಿನ್ ಶ್ರೀ ಮಂಜುನಾಥಸ್ವಾಮಿ, ನಂ.113, 3ನೇ ತಿರುವು, ನಂದಿನಿ ಬಡಾವಣೆ, ಮೈಸೂರು ಜನ್ಮ ದಿನಾಂಕ: 25.11.2001 (14 ವರ್ಷ) 10ನೇ ತರಗತಿ | ಮಾ॥ ಜಿ.ಎಂ. ಶಶಿಕುಮಾರ್, ಇವರು ದಿನಾಂಕ:06.06.2016ರಂದು ಶಾಲಾ ಮಕ್ಕಳನ್ನು ಕರೆದೊಯ್ಯುತ್ತಿದ್ದ ವಾಹನದಲ್ಲಿ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡಿದ್ದ ವೇಳೆಯಲ್ಲಿ ಅದೇ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಈ ಬಾಲಕ ಬಸ್ಸಿನ ತುರ್ತು ನಿರ್ಗಮನ ದ್ವಾರವನ್ನು ತೆರೆದು ಹೊರಗೆ ಜಿಗಿದು ಹಲವಾರು ಮಕ್ಕಳನ್ನು ಬಸ್ಸಿನಿಂದ ಹೊರಗಿಳಿಸಿ ಪ್ರಾಣ ರಕ್ಷಣೆ ಮಾಡಿ ಧೈರ್ಯ ಸಾಹಸ ಪ್ರದರ್ಶಿಸಿ, ಸಂಭವಿಸಬಹುದಾದ ಅನಾಹುತವನ್ನು ತಪ್ಪಿಸಿರುತ್ತಾರೆ. |

## ಮಕ್ಕಳ ಕಲ್ಯಾಣ ಪ್ರಶಸ್ತಿಗಳು

ಕರ್ನಾಟಕ ರಾಜ್ಯದಲ್ಲಿ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಸ್ವಯಂ ಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸೇವೆಯನ್ನು ಗುರುತಿಸಿ ಪ್ರತಿ ವರ್ಷ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ. ಅದರಂತೆ 2016ನೇ ಸಾಲಿನಲ್ಲಿ ಈ ಕೆಳಕಂಡ 4 ಸಂಸ್ಥೆಗಳು ಹಾಗೂ 4 ವ್ಯಕ್ತಿಗಳನ್ನು ಆಯ್ಕೆ ಮಾಡಲಾಗಿದ್ದು, ಇವರಿಗೆ ರಾಜ್ಯ ಪ್ರಶಸ್ತಿಯನ್ನು ದಿನಾಂಕ: 14.11.2016 ರಂದು ನಡೆಯುವ ಮಕ್ಕಳ ದಿನಾಚರಣೆಯ ಸಮಾರಂಭದಲ್ಲಿ ವಿತರಿಸಲಾಗುವುದು. ಸಂಘ–ಸಂಸ್ಥೆಗಳಿಗೆ ನೀಡುವ ಪ್ರಶಸ್ತಿಯು ರೂ.1.00 ಲಕ್ಷ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ ಮತ್ತು ವೈಯಕ್ತಿಕ ಪ್ರಶಸ್ತಿಯು ರೂ.25,000/- ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

| **ಕ್ರ. ಸಂ** | **ಸಂಸ್ಥೆಯ ಹೆಸರು ಮತ್ತು ವಿಳಾಸ** | **ಸಾಧನೆ** |
|---|---|---|
| 1 | ಅಕ್ಷರ ಫೌಂಡೇಷನ್, #621, 5ನೇ ಮುಖ್ಯರಸ್ತೆ, ಬಿ.ಚನ್ನಸಂದ್ರ ಬಸ್ ನಿಲ್ದಾಣದ ಹತ್ತಿರ, | ಸಂಸ್ಥೆಯು ಮಕ್ಕಳ ಭಾಷೆ ಮತ್ತು ಗಣಿತ ಕೌಶಲ್ಯತೆಯನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಲ್ಲಿ ಓದುವ ಹವ್ಯಾಸವನ್ನು ಹೆಚ್ಚಿಸಲು 3500 ಗ್ರಂಥಾಲಯಗಳನ್ನು ಸ್ಥಾಪಿಸಿರುತ್ತದೆ. ಮಕ್ಕಳು ಗಣಿತ ಕಲಿಯುವುದು |

| | | |
|---|---|---|
| | ಓ.ಎಂ.ಬಿ.ಆರ್ ಲೇಔಟ್, ಬಾಣಸವಾಡಿ, ಬೆಂಗಳೂರು-560 043 | ಸುಲಭವಾಗುವಂತೆ ಕಲಿಕಾ ಕಿಟ್‌ಗಳನ್ನು ತಯಾರಿಸಿರುತ್ತದೆ. ಮಕ್ಕಳಿಗೆ ಗುಣಮಟ್ಟ ಶಿಕ್ಷಣ ಕಲಿಸುವ ಉದ್ದೇಶದಿಂದ ವಿವಿಧ ಕಾರ್ಯಕ್ರಮಗಳ ಮೂಲಕ ಶಿಕ್ಷಕರಿಗೆ ತರಬೇತಿಯನ್ನು ನೀಡುತ್ತಿದ್ದಾರೆ. ನಿರಂತರ ಶಿಕ್ಷಣ ಚಟುವಟಿಕೆ ನಡೆಸಲು ಸಾವಿರಾರು ಯುವಕರಿಗೆ ತರಬೇತಿ ನೀಡಿ ಸ್ವಯಂ ಸೇವಕರನ್ನಾಗಿ ಮಾಡಿರುತ್ತಾರೆ. ಈ ಸಂಸ್ಥೆಯ ಪರಿಶ್ರಮದಿಂದ 6 ಸರ್ಕಾರಿ ಶಾಲೆಗಳ ಮಕ್ಕಳು ಅಂತರರಾಷ್ಟ್ರೀಯ ರೋಬೋಟಿಕ್ಸ್ ಸ್ಪರ್ಧೆಯಲ್ಲಿ ಭಾಗವಹಿಸಿರುತ್ತಾರೆ. ಸಂಸ್ಥೆಯು ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಭಾಗಿತ್ವದಲ್ಲಿ ಕೆಲಸ ನಿರ್ವಹಿಸುತ್ತಿದೆ. ಸುಮಾರು 9 ಲಕ್ಷ ಮಕ್ಕಳು ಪ್ರಯೋಜನ ಪಡೆದಿರುತ್ತಾರೆ. |
| 2 | ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್, #197/1, ಜನತಾ ನಗರ, ಬೋಗಾದಿ 2ನೇ ಹಂತ, ಮೈಸೂರು-570 009 | ಶ್ರವಣ ದೋಷವುಳ್ಳ ಮಕ್ಕಳ ಪೋಷಕರಿಗೆ ಮಾರ್ಗದರ್ಶನ ನೀಡುವ ಹಾಗೂ ಅಂತಹ ಮಕ್ಕಳಿಗೆ ಪೂರ್ವಪ್ರಾಥಮಿಕ ತರಬೇತಿ ನೀಡುವ ಉದ್ದೇಶದಿಂದ 1982ನೇ ಇಸವಿಯಲ್ಲಿ ಈ ಸಂಸ್ಥೆಯನ್ನು ಪ್ರಾರಂಭಿಸಲಾಗಿರುತ್ತದೆ. ಸಂಸ್ಥೆಯು ಪೂರ್ವ ಪ್ರಾಥಮಿಕ ತರಬೇತಿ ಕೇಂದ್ರವನ್ನು ಪ್ರಾರಂಭಿಸಿ ಕಿವುಡು ಮಕ್ಕಳಿಗೆ ವಾಕ್ ಶ್ರವಣ ತರಬೇತಿ ನೀಡುತ್ತಿದೆ. ಈ ಸಂಸ್ಥೆಯಲ್ಲಿ ತಾಯಂದಿರೆ ಶಿಕ್ಷಕಿಯರು. ಮಕ್ಕಳಿಗೆ 3-4 ವರ್ಷಗಳ ಕಠಿಣ ತರಬೇತಿ ನೀಡಿ ಮಾತನಾಡಲು, ಓದಲು ಮತ್ತು ಬರೆಯಲು ಕಲಿಸಿ ಮುಂದಿನ ಶಿಕ್ಷಣವನ್ನು ಸಾಮಾನ್ಯ ಶಾಲೆಗಳಲ್ಲಿ ಮುಂದುವರೆಸಿರುತ್ತಾರೆ. ಸಂಸ್ಥೆಯಲ್ಲಿ ತರಬೇತಿಗಾಗಿ ವಿಶಾಲವಾದ ಕೊಠಡಿ, ಅಗತ್ಯವಿರುವ ಪೀಠೋಪಕರಣ, ಸೌಂಡ್ ಪ್ರೂಫ್ ಕೊಠಡಿ, ಅತಿಥಿ ಗೃಹ, ವಸತಿ ಗೃಹ, ವಿಶಾಲವಾದ ಆಟದ ಮೈದಾನ ಇತ್ಯಾದಿ ಸೌಲಭ್ಯಗಳಿರುತ್ತದೆ. ಮಕ್ಕಳಿಗೆ ಶ್ರವಣ ಯಂತ್ರ ಖರೀದಿಸಲು, ಶಸ್ತ್ರ ಚಿಕಿತ್ಸೆ ಮಾಡಿಸಲು ಹಣ ಸಹಾಯ ಮಾಡುತ್ತಿದೆ. ಸುಮಾರು 1000ಕ್ಕೂ |

| | | |
|---|---|---|
| | | ಹೆಚ್ಚು ಮಕ್ಕಳು ವಾಕ್‌ಶ್ರವಣ ತರಬೇತಿ ಪಡೆದು ಸಮಾಜದ ಮುಖ್ಯವಾಹಿನಿಗೆ ಸೇರಿರುತ್ತಾರೆ. |
| 3 | ಅಂತ್ಯೋದಯ ಸಮಾಜ ಸೇವಾ ಸಂಸ್ಥೆ, #1811, ಬಸವನಗರ, ಮುಧೋಳ್ ತಾಲ್ಲೂಕು,<br><br>ಬಾಗಲಕೋಟೆ ಜಿಲ್ಲೆ–587 313 | ಸಂಸ್ಥೆಯು ಮುಧೋಳ ತಾಲ್ಲೂಕಿನ ಆಯ್ದ 35 ಹಳ್ಳಿಗಳ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಕ್ಲಬ್‌ಗಳನ್ನು ಕ್ರಿಯಾಶೀಲಗೊಳಿಸಿ ಅರಿವು ಮೂಡಿಸಿರುತ್ತಾರೆ. ಈ ಕ್ಲಬ್‌ಗಳ ಮೂಲಕ 875 ಮಕ್ಕಳು ತರಬೇತಿ ಪಡೆದಿರುತ್ತಾರೆ. ಮುಧೋಳ ತಾಲ್ಲೂಕಿನ ಆಯ್ದ 10 ಹಳ್ಳಿಗಳ ದಲಿತ ಸಮುದಾಯದ ಮಕ್ಕಳನ್ನು ಸಶಕ್ತಗೊಳಿಸಲು ಮಕ್ಕಳ ಪಾರ್ಲಿಮೆಂಟ್ ಮೂಲಕ ತಮ್ಮ ಸಮಸ್ಯೆಗಳ ಬಗ್ಗೆ ಮಕ್ಕಳೇ ಕಾರ್ಯಪ್ರವೃತ್ತರಾಗಿ ಪರಿಹಾರ ಕಂಡುಕೊಳ್ಳುವಲ್ಲಿ ಅವರನ್ನು ಪ್ರೇರೇಪಿಸಿರುತ್ತದೆ. ಮಕ್ಕಳ ಗ್ರಾಮಸಭೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ತರಬೇತಿ ನೀಡಿರುತ್ತದೆ. ಬಾಲ್ಯ ವಿವಾಹ ಮತ್ತು ಬಾಲ ಕಾರ್ಮಿಕತೆಯಿಂದ 20 ಮಕ್ಕಳನ್ನು ರಕ್ಷಿಸಿರುತ್ತದೆ. ಸಂಸ್ಥೆಯು ಮಕ್ಕಳಿಗಾಗಿ ಬೇಸಿಗೆ ಶಿಬಿರಗಳನ್ನು ನಡೆಸಿರುತ್ತದೆ. ಮಕ್ಕಳ ಸಾಗಾಣಿಕೆ, ಪೋಕ್ಸೋ ಕಾಯ್ದೆ, ಮಕ್ಕಳ ರಕ್ಷಣೆ, ಬಾಲ್ಯ ವಿವಾಹ ಇತ್ಯಾದಿ ಮಕ್ಕಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಜಾಗೃತಿ ಶಿಬಿರಗಳನ್ನು ಹಮ್ಮಿಕೊಂಡಿರುತ್ತದೆ. |
| 4 | ಮಾರ್ಗದರ್ಶಿ ಸೊಸೈಟಿ,<br><br>ಪ್ಲಾಟ್ ನಂ100/ಎ, ಸಿದ್ದೇಶ್ವರ ನಿಲಯ, ಭೀಮಶಕ್ತಿ ಆಟೋ ನಿಲ್ದಾಣದ ಹತ್ತಿರ,<br><br>ಸಿಐಬಿ ಕಾಲೋನಿ, ಶಕ್ತಿನಗರ,<br><br>ಕಲಬುರಗಿ–585 103 | ಸಂಸ್ಥೆಯು ಮಕ್ಕಳ ಹಕ್ಕುಗಳ ಸಂರಕ್ಷಣೆ ಬಗ್ಗೆ ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ ಸದಸ್ಯರಿಗೆ ಕಾರ್ಯಗಾರವನ್ನು ಹಮ್ಮಿಕೊಂಡಿ ರುತ್ತದೆ. ಬಾಲ್ಯವಿವಾಹ ತಡೆಗಟ್ಟುವ ಬಗ್ಗೆ ತರಬೇತಿಯನ್ನು ನೀಡಿರುತ್ತಾರೆ. ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳ ಆರೋಗ್ಯ ತಪಾಸಣೆಯನ್ನು ಮಾಡಿಸಿರುತ್ತಾರೆ. ಪೋಕ್ಸೋ ಕಾಯ್ದೆ ಕುರಿತು ಕಾರ್ಯಗಾರವನ್ನು ನಡೆಸಿರುತ್ತದೆ. ಕಾಣೆಯಾದ ಬುದ್ಧಿಮಾಂದ್ಯ ಬಾಲಕನನ್ನು ರಕ್ಷಿಸಿ ಪಾಲಕರ ವಶಕ್ಕೆ ಒಪ್ಪಿಸಿರುತ್ತಾರೆ. ಮಕ್ಕಳಿಗಾಗಿ ಪ್ರಬಂಧ ಸ್ಪರ್ಧೆ, ರಕ್ಷಾ ಬಂಧನ ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸಿರುತ್ತಾರೆ. ಆಪರೇಷನ್ |

| | | |
|---|---|---|
| | | ಸ್ಮೈಲ್ ಅಡಿ 81 ಮಕ್ಕಳನ್ನು ರಕ್ಷಿಸಿರುತ್ತದೆ. |

| ಕ್ರ. | ವ್ಯಕ್ತಿಯ ಹೆಸರು ಮತ್ತು ವಿಳಾಸ | ಸಾಧನೆ |
|---|---|---|
| 1 | ಶ್ರೀ ಶ್ರೀರಾಮರೆಡ್ಡಿ,<br>ಕಾರ್ಯದರ್ಶಿಗಳು,<br>ಶ್ರೀ ಭೈರವೇಶ್ವರ ವಿದ್ಯಾನಿಕೇತನ,<br>ಬೈರಪಲ್ಲಿ,<br>ಶ್ರೀನಿವಾಸಪುರ ತಾಲ್ಲೂಕು,<br>ಕೋಲಾರ ಜಿಲ್ಲೆ–563 135 | ಇವರು ನಿವೃತ್ತ ಶಿಕ್ಷಕರಾಗಿದ್ದು, ಹಾಲಿ ಶ್ರೀ ಭೈರವೇಶ್ವರ ವಿದ್ಯಾನಿಕೇತನ, ಬೈರಪಲ್ಲಿ, ಈ ಸಂಸ್ಥೆಯ ಅಡಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕೇವಲ 80 ಮಕ್ಕಳಿಂದ ಪ್ರಾರಂಭವಾದ ಸಂಸ್ಥೆಯಲ್ಲಿ ಹಾಲಿ 3000 ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಆಧುನಿಕ ವಿದ್ಯಾಭ್ಯಾಸಕ್ಕೆ ಬೇಕಾದ ಎಲ್ಲಾ ಅನುಕೂಲಗಳನ್ನು ಗ್ರಾಮೀಣ ಬಡಮಕ್ಕಳಿಗೂ ಸಿಗುವಂತೆ ಮಾಡಲು ತಮ್ಮ ಆರೋಗ್ಯವನ್ನು ಲೆಕ್ಕಿಸದೆ ರಾತ್ರಿ ಹಗಲು ಶ್ರಮಿಸಿ ಸುಸಜ್ಜಿತ ಕಂಪ್ಯೂಟರ್ ಲ್ಯಾಬ್ ನ್ನು ಅಳವಡಿಸಿದ್ದಾರೆ. ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡುತ್ತಿದ್ದಾರೆ. ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಶಿಕ್ಷಕರಿಗಾಗಿ ವಿಶೇಷ ತರಬೇತಿಯನ್ನು ಬೋಧನೆಯಲ್ಲಿ ಅಳವಡಿಸುತ್ತಿದ್ದಾರೆ. ಇವರು ಹಲವಾರು ಪುಸ್ತಕಗಳನ್ನು ಬರೆದಿರುತ್ತಾರೆ. ಇವರು ಶಾಲೆಗಳಲ್ಲೇ ವಾಸ ಮಾಡಿ ಸಾವಿರಾರು ಮಕ್ಕಳನ್ನು ಸ್ಪರ್ಧಾ ಜಗತ್ತಿಗೆ ತಯಾರು ಮಾಡಲು ಮಾರ್ಗದರ್ಶನ ನೀಡುತ್ತಿದ್ದಾರೆ. |
| 2 | ಶ್ರೀ ಶ್ರೀಧರ ಹಂದೆ,<br>ಸಂಚಾಲಕರು,<br>ಸಾಲಿಗ್ರಾಮ ಮಕ್ಕಳ ಮೇಳ,<br>ಪಟೇಲರ ಮನೆ, ಕೋಟ ಅಂಚೆ,<br>ಉಡುಪಿ ಜಿಲ್ಲೆ–576 221 | ಇವರು ಯಕ್ಷಗಾನ ಕಲೆಯ ಬಗ್ಗೆ ಮಕ್ಕಳಿಗೆ ತರಬೇತಿಯನ್ನು ನೀಡುತ್ತಿದ್ದಾರೆ. ಮಕ್ಕಳಿಗೆ ಅವರ ಶೈಕ್ಷಣಿಕ ಪ್ರಗತಿಗೆ ಅಡ್ಡಿಯಾಗದಂತೆ ಅವರ ಬಿಡುವಿನ ವೇಳೆಯಲ್ಲಿ ಅವರವರ ಮನೆಯಲ್ಲಿ ಹಾಗೂ ನಿರ್ದೇಶಕರ ಮನೆಯಲ್ಲಿ ತರಬೇತಿಯನ್ನು ನೀಡಿರುತ್ತಾರೆ. ಇವರಿಂದ ತರಬೇತಿ ಪಡೆದ ತಂಡವು ರಾಜ್ಯದಾದ್ಯಂತವಲ್ಲದೆ ಮುಂಬೈ, ಗೋವಾ, ಚೆನ್ನೈ, ದೆಹಲಿ ಹಾಗೂ ಇತರೆ ರಾಜ್ಯಗಳಲ್ಲಿ ಪ್ರದರ್ಶನಗಳನ್ನು ನೀಡಿರುತ್ತದೆ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಅಟ್ಲಾಂಟಾ, ಬಫೆಲೋ, ನ್ಯೂಯಾರ್ಕ್, ವಾಷಿಂಗ್ಟನ್, ಮ್ಯಾಂಚೆಸ್ಟರ್, ಲಂಡನ್‌ನಲ್ಲಿ ಹಲವು |

| | | |
|---|---|---|
| | | ಪ್ರದರ್ಶನಗಳನ್ನು ನೀಡಿರುತ್ತದೆ. ಕಳೆದ 40 ವರ್ಷಗಳಲ್ಲಿ ಸುಮಾರು 2500ಕ್ಕೂ ಹೆಚ್ಚಿನ ಪ್ರದರ್ಶನಗಳನ್ನು ನೀಡಲು ಕಾರಣರಾಗಿರುತ್ತಾರೆ. ಸುಮಾರು 2500 ಮಕ್ಕಳು ಪ್ರಯೋಜನ ಪಡೆದಿರುತ್ತಾರೆ. |
| 3 | ಶ್ರೀಮತಿ ನಾಗರತ್ನಾ ಸುನೀಲ ರಾಮಗೌಡಾ, ಕೇರಾಫ್. ಎಂ.ಬಿ.ಉಪಾಧ್ಯೆ,<br><br>ಪ್ಲಾಟ್ ನಂ:1747/3, ಸಿಟಿಎಸ್ ನಂ–6144/ಬಿ, ಸೆಕ್ಟರ್ ನಂ–08, ಅಂಜನೇಯ ನಗರ,<br><br>ಬೆಳಗಾವಿ–590 016 | ಇವರು ಸ್ವತಃ ಎಚ್.ಐ.ವಿ ಸೋಂಕಿತರಾಗಿದ್ದು, ಎಚ್.ಐ.ವಿ ಸೋಂಕಿತ ಜನರ ಶ್ರೇಯೋಭಿವೃದ್ಧಿಗಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಎಚ್.ಐ.ವಿ ಸೋಂಕಿತ ಜನರು ಎಲ್ಲರಂತೆ ಸಾಮಾನ್ಯ ಜೀವನ ನಡೆಸುವಂತೆ ಸ್ಪಂದನಾ ನೆಟ್‌ವರ್ಕ್ ಆಫ್ ಪಾಸಿಟಿವ್ ಪೀಪಲ್ ಸಂಸ್ಥೆಯನ್ನು ಸ್ಥಾಪಿಸಿ ಕೆಲಸ ಪ್ರಾರಂಭಿಸಿರುತ್ತಾರೆ. ಸರ್ಕಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಎಚ್.ಐ.ವಿ ಸೋಂಕಿತ ಮಕ್ಕಳು ಮತ್ತು ಗರ್ಭಿಣಿ ಮಹಿಳೆಯರಿಗೆ ಪಿ.ಆರ್.ಓ ಆಗಿ ಆರೋಗ್ಯದ ಬಗ್ಗೆ ಆಪ್ತ ಸಮಾಲೋಚನೆ ಮಾಡಿರುತ್ತಾರೆ. ಕಾಲೇಜಿನ ವಿದ್ಯಾರ್ಥಿಗಳಿಗೆ ಹಾಗೂ ಪ್ರೌಢ ಶಾಲಾ ಮಕ್ಕಳಿಗೆ ಎಚ್.ಐ.ವಿ ಏಡ್ಸ್ ಕುರಿತು ಹದಿಹರೆಯದಲ್ಲಾಗುವ ಬದಲಾವಣೆಗಳು ಹಾಗೂ ಜೀವನ ಕೌಶಲ್ಯಗಳ ಬಗ್ಗೆ ಅಮೇರಿಕದ ಆರೋಗ್ಯ ವಿಭಾಗದ ವತಿಯಿಂದ ಮೇಲ್ವಿಚಾರಕಿಯಾಗಿ ತರಬೇತಿ ನೀಡಿರುತ್ತಾರೆ. ಎಚ್.ಐ.ವಿ ಸೋಂಕಿತ ಅನಾಥ ಮಕ್ಕಳಿಗೆ ಆಪ್ತ ಸಮಾಲೋಚನೆ, ಗುಂಪು ಸಭೆ, ಪೌಷ್ಟಿಕ ಆಹಾರ, ಶಾಲಾ ಸಾಮಗ್ರಿಗಳ ವಿತರಣೆ, ಮನರಂಜನಾ ಕಾರ್ಯಕ್ರಮ ನಡೆಸುತ್ತಿದ್ದಾರೆ. |
| 4 | ಫಾದರ್. ಸಂತೋಷ್ ಬಾಪು,<br><br>ಸ್ಪರ್ಷ ಕೇರ್ ಹೋಂ, ಕೌಡಿಯಾಳ್, ನೀರ್ಗುಡಿ ಅಂಚೆ, ಬಸವಕಲ್ಯಾಣ ತಾಲ್ಲೂಕು, ಬೀದರ್ ಜಿಲ್ಲೆ–585 331 | ಇವರು ಸ್ಪರ್ಷ ಕೇರ್ ಹೋಂ ಸಂಸ್ಥೆಯ ನಿರ್ದೇಶಕರಾಗಿದ್ದು, ಎಚ್.ಐ.ವಿ ಸೋಂಕಿತ ಮಕ್ಕಳ ಆರೈಕೆಗಾಗಿ ಶ್ರಮಿಸುತ್ತಿದ್ದಾರೆ. ಇವರು ಬೀದರ್, ಕಲಬುರಗಿ, ಯಾದಗಿರಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಎಚ್.ಐ.ವಿ ಸೋಂಕಿತ ಮಕ್ಕಳ, ಮಹಿಳೆಯರ, ರೈತರ ಮತ್ತು ವಿಕಲಚೇತನರ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆ. ಪ್ರತಿ ವರ್ಷ ಎಚ್.ಐ.ವಿ ಸೋಂಕಿತ ಮಕ್ಕಳಿಗೆ ವಿಶೇಷ ತರಬೇತಿ ಶಿಬಿರವನ್ನು ಏರ್ಪಡಿಸಿರುತ್ತಾರೆ. |

| | | |
|---|---|---|
| | | 120 ಎಚ್.ಐ.ವಿ ಸೋಂಕಿತ ಮಕ್ಕಳಿಗೆ ಕೌಶಲ್ಯ ಆಧಾರಿತ ತರಬೇತಿಯನ್ನು ನೀಡಿರುತ್ತಾರೆ. ಮದರ್ ಥೆರೆಸಾ ಪುಣ್ಯ ಸ್ಮರಣೆ ನಿಮಿತ್ತ ಪ್ರತಿ ವರ್ಷ ರಕ್ತದಾನ ಶಿಬಿರವನ್ನು ಏರ್ಪಡಿಸಿರುತ್ತಾರೆ. ವಿಶ್ವ ಏಡ್ಸ್ ದಿನಾಚರಣೆಯನ್ನು ಆಚರಿಸುವುದರೊಂದಿಗೆ ಪ್ರತಿ ಮಾಹೆ ಎಚ್.ಐ.ವಿ ಸೋಂಕಿತರ ಸಭೆಯನ್ನು ನಡೆಸಿರುತ್ತಾರೆ. |

## ಅಸಾಧಾರಣ ಪ್ರತಿಭಾ ಪುರಸ್ಕಾರ

ರಾಜ್ಯ ಸರ್ಕಾರವು ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಪ್ರತಿಭೆಯನ್ನು ಹೊಂದಿರುವ ಈ ಕೆಳಕಾಣಿಸಿರುವ 17 ಮಕ್ಕಳನ್ನು ರಾಷ್ಟ್ರ ಪ್ರಶಸ್ತಿಗಾಗಿ ನಾಮ ನಿರ್ದೇಶನ ಮಾಡಿದ್ದು, ಅವರೆಲ್ಲರನ್ನು ರಾಜ್ಯ ಮಟ್ಟದಲ್ಲಿ ಆಚರಿಸಲಾಗುವ ಮಕ್ಕಳ ದಿನಾಚರಣೆ ಸಮಾರಂಭದಲ್ಲಿ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು.

| ಕ್ರ. ಸಂ | ಹೆಸರು ಮತ್ತು ವಿಳಾಸ | ಆಯ್ಕೆಯಾಗಿರುವ ಕ್ಷೇತ್ರ |
|---|---|---|
| 1 | ಕು॥ ಸಾಕ್ಷಿ ಎಸ್ ಕೋಳೆಕರ್,<br>ತಂದೆ:ಶಿವಾನಂದ ಕೋಲೆಕರ್,<br>#405, ಗಿಲಗಂಚಿ ಅಪಾರ್ಟ್‌ಮೆಂಟ್, | ಕಲೆ |
| 2 | ಕು॥ ಶ್ರೀರಕ್ಷಾ,<br>" ವರದ " ಕೆ.ಎಂ.ಸಿ. ಹಿಂಭಾಗ,<br>ಡಾ.ರಾಮಕೃಷ್ಣ ರಾವ್ ಕಾಂಪೌಂಡ್,<br>ಬಿಜೈ, ಮಂಗಳೂರು. | ಕಲೆ |
| 3 | ಮಾ॥ ಸಾಕೃತ್ ಎಚ್.ವಿ.<br>ತಂದೆ: ವಿಶ್ವನಾಥ್ ಎಚ್.ಎಸ್.,<br>ಶ್ರೀ ಹನುಮಾನ್ ಟೈರ್ಸ್, #30/1, ಜಾಲಪ್ಪ ಕಾಲೇಜ್ ರಸ್ತೆ, ದರ್ಗಾ ಜೋಗಿಹಳ್ಳಿ, ದೊಡ್ಡಬಳ್ಳಾಪುರ, ಬೆಂಗಳೂರು–561 203. | ಕ್ರೀಡೆ |
| 4 | ಕು॥ ವರ್ಷಾ ವಿ. | ಕ್ರೀಡೆ |

| | | |
|---|---|---|
| | ತಂದೆ:ವಿಜಯಕುಮಾರ್ ಎನ್,<br><br>ಕೆಪಿಟಿಸಿಎಲ್ ಕ್ವಾರ್ಟಸ್,ಡೋರ್ ನಂ.ಇಬಿ-87,<br><br>ಕವೂರ್, ಮಂಗಳೂರು-575-015 | |
| 5 | ಮಾ॥ ಅಜಿಂಕ್ಯ ಘನಶ್ಯಾಮ್ ಜೋಷಿ,<br><br>ತಂದೆ: ಘನಶ್ಯಾಮ್ ಜೋಷಿ,<br><br>#3514, ನರ್ವೇಕರ್‌ಗಲ್ಲಿ, ಬೆಳಗಾವಿ-590 001 | ಕ್ರೀಡೆ |
| 6 | ಕು॥ ಕರಿಷ್ಮಾ ಎಸ್ ಸನಿಲ್,<br><br>ತಂದೆ: ಬಿ. ಸುದರ್ಶನ್ ಸನಿಲ್,<br><br>"ರಾಮ್ ಮೈರೆ ಕೃಪಾ",3-194,ಹೊಸಲಾ ಗ್ರಾಮ್,<br><br>ಬಾರ್ಕೂರ್, ಉಡುಪಿ ಜಿಲ್ಲೆ-576 210 | ಕ್ರೀಡೆ |
| 7 | ಕು॥ ರೇವತಿ ನಾಯಕ ಎಂ,<br><br>2ನೇ ಮುಖ್ಯರಸ್ತೆ, 18ನೇ ಅಡ್ಡರಸ್ತೆ,<br><br>ಕೆ.ಟಿ.ಜೆ.ನಗರ, ದಾವಣಗೆರೆ | ಕ್ರೀಡೆ |
| 8 | ಮಾ॥ ಸುನಾದ ಕೃಷ್ಣ ಎ,<br><br>ತಂದೆ: ಡಾ.ಕುಮಾರ್ ಸುಬ್ರಹ್ಮಣ್ಯ ಭಟ್ ಎ,<br><br>ನಂ.2-45/22,ಸ್ಕಂದಕೃಪಾ,ಹೇಮಾವತಿನಗರ, ಅಂಚೆ:ಪಡಿಲ್,ಮಂಗಳೂರು-575 007 | ಸಂಗೀತ |
| 9 | ಕು॥ ಸೌಮ್ಯಶ್ರೀ ಹಿರೇಮಠ್,<br><br>ತಂದೆ: ರಾಜು ಹಿರೇಮಠ್,<br><br>ಪಿಡಬ್ಲ್ಯೂಡಿ ಕ್ವಾರ್ಟಸ್,ನಂ.ಪಿ-2,ಎ.ಪಿ.ಜೆ.<br><br>ಆಜಾದ್ ಶಾಲೆ ಎದುರು,<br><br>ಜಿಲ್ಲಾ ಪಂಚಾಯಿತಿ ಕಛೇರಿ ಹತ್ತಿರ, ಕೋಟೆ, ಬಳ್ಳಾರಿ. | ಸಾಂಸ್ಕೃತಿಕ |
| 10 | ಕು॥ ತುಳಸಿ ಹೆಗಡೆ,<br><br>ತಂದೆ: ರಾಘವೇಂದ್ರ ಎಸ್ ಹೆಗಡೆ, | ಸಾಂಸ್ಕೃತಿಕ |

| | | |
|---|---|---|
| | ರಾಘವೇಂದ್ರ ಬೆಟ್ಟಕೊಪ್ಪ, ನಮ್ಮನೆ,<br>ಕಾನಗೊಡ್, ಶಿರಸಿ, ಉತ್ತರ ಕನ್ನಡ. | |
| 11 | ಕು॥ ಸಾಯಿ ಸಿಂಚನ. ಎಚ್.ಎಂ,<br>ತಂದೆ:ಎಚ್.ಆರ್.ಮಂಜುನಾಥ್,<br>ಮಾರಿಕಾಂಬ ದೇವಸ್ಥಾನದ ಹತ್ತಿರ,<br>2ನೇ ಅಡ್ಡರಸ್ತೆ, ಚಿಲಕಾದ್ರಿ ಹಳ್ಳಿ, ಹರಿಗೆ,<br>ವಿದ್ಯಾನಗರ, ಶಿವಮೊಗ್ಗ. | ಸಾಂಸ್ಕೃತಿಕ |
| 12 | ಕು॥ ಅದ್ವಿತಾ ಮಹಾದೇವ ಬಡಿಗೇರ,<br>ತಂದೆ: ಮಹದೇವ ಎಸ್.ಬಡಿಗೇರ,<br>ಕೇರಾಫ್ ಪಿ.ಜೆ. ಬಡಿಗೇರ್,"ಅನುಗ್ರಹ ಬಿಲ್ಡಿಂಗ್", ಬ್ಯಾಂಕರ್ಸ್ ಕಾಲೋನಿ, ಹಳೆ ಕೆಎಚ್‌ಬಿ ಕಾಲೋನಿ ಹಿಂಭಾಗ,ಸೋಲಾಪುರ ರಸ್ತೆ,ವಿಜಯಪುರ–586 103. | ಇತರೆ ಪ್ರತಿಭೆ |
| 13 | ಕು॥ ಸೀಮಾ ನಿಂಗಪ್ಪ ಶೆಟ್ಟರ್,<br>ತಂದೆ: ನಿಂಗಪ್ಪ ಶೆಟ್ಟರ್,<br>ಸರ್ಕಾರಿ ಆಸ್ಪತ್ರೆ ಹತ್ತಿರ, ಇಂದಿರಾನಗರ,<br>ಕಾರಟಗಿ, ಕೊಪ್ಪಳ. | ನಾವೀನ್ಯತೆ |
| 14 | ಕು॥ ಶ್ರಾವ್ಯ ಪಿ, ತಂದೆ ಪರಮೇಶ್ವರ ವೈ.ವಿ,<br>ಚಿಕ್ಕನಹಳ್ಳಿ, ಕಳ್ಳಂಬೆಳ್ಳ ಹೋಬಳಿ,<br>ಸಿರಾ ತಾಲ್ಲೂಕು, ತುಮಕೂರು–572 125 | ನಾವೀನ್ಯತೆ |
| 15 | ಕು॥ ಮೈತ್ರಿ ಎಂ ಬೈರಿ,<br>" ಮಧುರ ", 5/297/ಎ3,<br>ಎ.ಕೆ.ನಗರ, ಮಣಿಪಾಲ್,<br>ಉಡುಪಿ–576 104. | ಶಿಕ್ಷಣ |
| 16 | ಮಾ॥ ಅಮೆಯ ಅತುಲ ಯಾಳಗಿ,<br># 540/50/1, ವಾಡಾ ಕಾಂಪೌಂಡ್, ಅನಗೋಳ<br>ಬೆಳಗಾವಿ–590007 | ಶಿಕ್ಷಣ |

| | | |
|---|---|---|
| 17 | ಮಾ॥ ರಿತಿನ್ ಪಿ.ಬಿ.,<br>ಶಕ್ತಿ ಮೊಟ್ಟೆ ಕೇಂದ್ರ,<br>ಉಮಾಶಂಕರ್ ಸ್ಟೋರ್ಸ್ ಎದುರು,<br>ಎಂ.ಎಚ್. ರಸ್ತೆ, ಚಿತ್ರದುರ್ಗ. | ಶಿಕ್ಷಣ |

**ರೋಲರ್ ಸ್ಕೇಟಿಂಗ್‌ನಲ್ಲಿ ವಿಶೇಷ ಸಾಧನೆ**

| | |
|---|---|
| 1 | ಮಾ॥ ಓಂ ಸ್ವರೂಪ್ ಗೌಡ ವೈ,<br>#322, 5ನೇ ಮುಖ್ಯ ರಸ್ತೆ, 9ನೇ ಅಡ್ಡರಸ್ತೆ, 1ನೇ ಹಂತ, ಬಿ.ಇ.ಎಂ.ಎಲ್ ಲೇಔಟ್, ಬಸವೇಶ್ವರನಗರ, ಬೆಂಗಳೂರು – 560079 |

ಈ ಎರಡೂ ದಿನಗಳಲ್ಲಿ ಸುಮಾರು 10000ದಿಂದ 15000ಮಕ್ಕಳು ತಮ್ಮ ಪೋಷಕರೊಂದಿಗೆ ಭಾಗವಹಿಸಿ ಕಾರ್ಯಕ್ರಮದಲ್ಲಿ ನಲಿದು ಆನಂದಿಸಲಿದ್ದಾರೆ. ಸದರಿ ಕಾರ್ಯಕ್ರಮಕ್ಕೆ ಎಲ್ಲರಿಗೂ ಉಚಿತ ಪ್ರವೇಶವನ್ನು ಕಲ್ಪಿಸಲಾಗಿದೆ. ಸದರಿ ದಿನಗಳಂದು ವೆಂಕಟಪ್ಪ ಆರ್ಟ್ ಗ್ಯಾಲರಿ ಮತ್ತು ಅಕ್ವೇರಿಯಂಗೆ ಸಹ ಉಚಿತ ಪ್ರವೇಶ ಕಲ್ಪಿಸಲಾಗಿದೆ.

ಸದರಿ ಕಾರ್ಯಕ್ರಮದ ಸ್ಥಳಕ್ಕೆ ಬೆಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶಗಳಿಂದ ಮಕ್ಕಳ ಹಾಗೂ ಪೋಷಕರ ಪ್ರಯಾಣದ ಸೌಲಭ್ಯಕ್ಕಾಗಿ ವಿಶೇಷ ಬಸ್‌ಗಳ ವ್ಯವಸ್ಥೆಯನ್ನು ಮಾಡಲು ಬಿ.ಎಂ.ಟಿ.ಸಿ ಸಾರಿಗೆ ಸಂಸ್ಥೆಯವರು ಒಪ್ಪಿರುತ್ತಾರೆ. ಕಬ್ಬನ್ ಉದ್ಯಾನವನದೊಳಗೆ ವಾಹನ ಸಂಚಾರವನ್ನು ದಿನಾಂಕ: 13 ಮತ್ತು 14ನೇ ನವೆಂಬರ್ 2016ರಂದು ನಿಷೇಧಿಸಲಾಗಿದೆ.

## Children's Festival

Bengaluru, November 11(Karnataka Information)

Department of Women and Child Development is celebrating Children’s Festival and Children’s Day on 13-11-2016 and 14-11-2016 respectively. Hon’ble Chief Minister of Karnataka will be inaugurating the Children’s Festival on 13-11-2016 in Cubbon Park, Bengaluru. On this Occasion Department will be releasing two important books; “Anthakarana”- A collection of success stories of rehabilitated children of Children’s Homes and “Nanna Kuritu Naane Aritaga, Balya Sundara”- A book written by District Child Protection Unit, Dharwad.

On this Children's Festival many more attractive activities will be organized for children like Group Dance, Magic Show, Comedy Show, Bombe vybhava, Yakshagana, Puppet Show and Folk Art Exhibition. Rural Sports like Gilli Daandu, Lagori, Mallakamba, Chowkabara, Kuntebille, Buguri will also be organized for the children. Adventure Sports like Kusti and also Environment, Forest, Scientific Exhibitions will be organized by respective Departments. HAL, ISRO, NAMMA METRO and other Departments will also exhibit their models. Drawing and painting, Fancy Dress, Healthy Baby Competition, Clay Modeling demonstration and exhibition have also been organized. Mysore Tonga etc have been arranged for the entertainment of the children. Overall there would be festive spirit all around.

The Hon'ble Chief Minister of Karnataka will inaugurate the Children's Day function on 14-11-2016 at 11 A.M. at Jawahar Bala Bhavan, Cubbon Park, Bengaluru and also release the Anthology of the short stories "Sankalpa" written by the children of State Children's Home. On this occasion the following awards will be conferred.

## HOYSALA & KELADI CHENNAMMA BRAVERY AWARDS FOR CHILDREN

The Department of Women and Child Development confers Bravery Award every year for the Children who have exhibited exceptional courage and presence of mind to save the life of others in dangerous circumstances. The following children have been selected for the Hoysala Bravery Award for the year 2016-17. The award carries a cash prize of Rs.10,000/-, a momento, citation and a medal.

| | Name and Address | Details of the Incident |
|---|---|---|
| | Master. Chiranth D.R, S/O Rangaswamy D.H, Amatekoppa, Shikaripura, Shimogga District. DOB: 19.08.2002 (14 Years)9th Standard | On 24th of November 2015 the school bus ferrying school children lost control and toppled near the pond. Master. Chiranth D.R, from Amatekoppa, Shikaripura, Shimogga District a Student of 9th standard who was travelling in the bus broke the glass and pulled the children from the bus and saved their lives. |
| | Master. Nithin H.A, S/O H.K Aiyanna, | On 17th July 2016 on the occasion of marsh wetland football tournament, Master Sufiyan accidently fell into the pond. Master Nithin H.A, from Arameri |

| | | |
|---|---|---|
| | Arameri Village, & Post, Virajpet Taluq,<br><br>Kodagu District<br><br>DOB: 28.06.2002 (14Years) 9th Standard | Village & Post, Virajpet Taluq,<br><br>Kodagu District a student of 9th standard got into the pond and lifted Sufiyan and saved his life. |
| | Master. Shreyas N Rao,<br><br>S/O Dr. Nagesh Rao,<br><br>No. 56/2, K.C Nagar, Mysore-570011<br><br>DOB: 21.11.2001<br><br>(14 Years) 10th Standard | On 6th June 2016 the school bus carrying children accidentally caught fire. Master Shreyas N Rao, K.C Nagar, Mysore a student of 10th standard who was travelling in the bus opened the emergency exit door and got down from the bus and pulled many children from the bus and saved their lives. |
| | Master. Shashikumar. G.M.<br><br>S/O Sri Manjunathaswamy, No.113,3rd Cross, Nandini Layout, Mysore<br><br>DOB: 25.11.2001<br><br>(14 Years) 10th Standard | On 6th June 2016 the school bus carrying children accidentally caught fire. Master Shreyas N Rao, K.C Nagar, Mysore a student of 10th standard who was travelling in the bus opened the emergency exit door and got down from the bus and pulled many children from the bus and saved their lives. |

## **Child Welfare Awards**

The Department also confers Awards every year for Institution and Individuals who have rendered commendable service in the field of child welfare. The following four Institution and four Individuals are selected for the said Award for the Year 2016. The Institution Award carries a cash prize of Rs.1.00 lakh, a momento and a citation and the Individual Award carries a cash prize of Rs.25,000/-,a momento and a citation.

| Sl. No | Name of the Institution and Address | Achievement |
|---|---|---|
| 1 | Akshara Foundation, No. 621, 5th main road, Near B Channasandra Bus Stop, OMBR Layout, Banasawadi, Bengaluru-560043 | The organization strives to develop language and mathematics skills among children. the organization has established 3500 libraries to develop reading habits for children studying in government schools. It has also developed learning kits to enable children to learn maths easily. To impart quality education to children, the organization has given training to teachers through various programmes. To organise continuous education activities, it has given training to thousands of youths and made them volunteers. Due to the effort of this organization , students from 6 government schools have participated in International Robotics Competitions. The organization works in partnership with Department of Education and Department of Women and Child Development. Nearly 9 lakhs children have been benefitted. |
| 2 | Anthyodaya Social Service Society, No.1811, Basavanagar, Mudhol Taluq, Bagalkot District-587-313 | The organization has activated child rights clubs in Government schools in selected 35 villages of Mudhol Taluk and created awareness. 875 children have received training through these clubs. To strengthen the children of backward community children's parliament were conducted in 10 selected villages of mudhol taluk and children were encouraged to find solutions for their problems. The children were facilitated to get membership in State Children's Parliament. The organization has given training to implememt children's grama sabhas effectively. It has saved 20 children from child marriage and child labour. The organization has conducted summer camps for children. The |

| | | |
|---|---|---|
| | | organization has conducted awareness camps on child trafficking, POCSO Act, child protection, child marriage and other child related issues. |
| 3 | Margadarshi society, Plot No 100/A, Siddheshwara Nilaya,Near Bhimashakthi Auto Stand, CBI Colony, Shivashakthi Nagar, Kalaburgi-585 103 | The organization has conducted seminars to teachers and SDMC members about child protection. It has also conducted training about child marraige. Health camps were conducted for children engaged in begging. Seminars were conducted about POCSO Act. A lost mentally diasabled boy was rescued and was handed over to his parents. Essay competitions, rakshabandhan programmes were organised for children. 81 children were rescued under operation SMILE. |
| 4 | Parents Association of Deaf Children, No.197/1, Janatha Nagar, Bogadi 2nd Stage, Mysore-570 009 | This organization was established in the year 1982 with a objective to educate and to guide parents of hearing impaired children and train these children. The organization started pre-primary centre and has been giving training in speech and hearing. The mothers of deaf children are the teachers of this school. The children are given 3-4 years of rigorous training to speak, read and write to enable them to continue their education in normal schools. The organization has big rooms for training, required furnitures, sound proof rooms, guest house, hostels, playground and other facilities. The organization assists children to buy hearing aids and gives monetory help for surgery. Nearly 1000 children have been given speech and hearing training and have been brought to the mainstream of the society. |

| **Sl. No** | **Name of the Individual and Address** | **Achievement** |
|---|---|---|

| | | |
|---|---|---|
| **1** | Shri Srirama Reddy,<br><br>Secretary, Sri Byraveshwara Vidya Nikethana, Byrapalli, Shrinivasapura Taluq, Kolar District. 563 135 | He is a retired teacher and is presently serving in Sri Byraveshwara Vidya Nikethana, Byrapalli. The organization was started with 80 children and presently 3000 children are studying in this school. Without caring for his health he has been working day and night to give modern education and facilities to rural poor children and has established computer lab in the school. He is giving importance to cultural and spiritual programmes. He has organised special training to teachers from various resource persons to upgrade teaching skills. He has written many books. He resides in the schools and guides thousands of children and prepares them for competitive world. |
| **2** | Shri Shridhara Hande,<br><br>Convenor, Saligrama Makkala Mela, Patelara Mane, Kota Post, Udupi District-576 221 | He is giving training to children in Yakshagana. He has been giving training to children at their homes and Director's home during their free time so that the training will not cause any hurdle for their education. The teams trained by him have given shows all over the state and also at Goa, Mumbai, Chennai, Delhi and other states. International level shows were given at Atlanta, Buffalo, New York, Washington, Manchester and London. More than 2500 shows were given from the past 40 years and 2500 children have |

| | | |
|---|---|---|
| | | been benefitted. |
| 3 | Smt. Nagarathna Sunila Ramagowda,<br><br>C/O M.B. Upadhye, Plot No. 1747/3, CTS No. 6144/B, Sector No. 08, Anjaneya Nagar,<br><br>Belagavi. 590 016 | She is HIV infected and she strives for the welfare of HIV infected persons. She has established a organization called Spandana Network of Positive People to enable people infected with HIV to lead a normal life. She has done counselling to HIV infected pregnant women and children in Government District Hospitals. She has given training to college and primary school children about HIV, AIDS and changes occurring during adolescent period. She has done counselling, group meeting, nutrition food, school material distribution, entertainment programmes to HIV infected orphan children. |
| 4. | Fr. Santhosh Bapu,<br><br>Sparsha Care Home, Kaudiyal,<br><br>Nirgudi Post, Basavakalyana Taluq, Bidar District-585 331 | He is the Director of Sparsha Care Home and is working for the treatment of HIV Positive Children. He has fought for the rights of HIV affected children, women, farmers and specially abled persons of Bidar, Kalaburagi, Yadgiri and Vijaypura Districts. Every year special training camps are conducted for HIV affected children. 120 HIV positive children are given skill based training. Every year blood donation camps were organised on the occasion of holy memory of Mother Theresa. Along with World AIDS Day celebration, every month meeting is |

| | | |
|---|---|---|
| | | organised for HIV effected people. |

## Exceptional Achievement Award for Children

The children who are exceptionally talented in the field of Art, Sports, Music, Culture, Innovation, Scholastic and Other fields will be recommended for the National Award.These children will be honoured with a momento and a citation on the occasion of Children's Day at the state level. The following children have been recommended for the National Award for the year 2016-17.

| Sl. No | Name and Address | Field of Achievement |
|---|---|---|
| 1 | Kum. Saakshi.S Kolekar,<br>D/O Shivanand Kolekar<br>405 Gilganchi Apartment,<br>Somavarpeth,Tilakwadi,<br>Belagavi-590 006. | Art |
| 2 | Kum. Shree Raksha ,<br>"Varada" Behind KMC ,<br>Dr. Ramakrishna Rao compound, Bejai,<br>Mangalore. | Art |
| 3 | Mast. Sakruth .H.V., S/O Vishwanath H.S.,<br>Shri Hanumn Tyres, #30/1, Jalappa College Road,<br>Darga jogihalli, Doddaballapur, Bangalore-561 203. | Sports |
| 4 | Kum. Varsha V<br>D/O Vijaykumar N.<br>KPTCL Quarters, D.No.EB-87, Kavoor,<br>Mangalore-575 015. | Sports |
| 5 | Mast. Ajinkya Ghanashyam joshin,<br>No.3514,Narvekargalli,<br>Belagavi-590 001. | Sports |
| 6 | Kum. Karishma S. Sanil ,<br>D/O of B. Sudarshan Sanil,<br>"Ram Maire Krupa" ,<br>3-194, Hosala village, Barkur,<br>Udupi District- 576 210 | Sports |

| | | |
|---|---|---|
| 7 | Kum. Revathi Nayaka .M.,<br>2Nd Main, 18th Cross, K.T.J Nagar,<br>Davanagere. | Sports |
| 8 | Mast. Sunaada Krishna.A<br>S/O Dr. Kumara Subrahmanya Bhat. A,<br>No. 2-45/22, Skandakripa, Hemavthi Nagar, Post-padil, Mangalore-575 007. | Music |
| 9 | Kum. Sowmya Shree Hiremath,<br>D/O Raju Hiremath,<br>P.W.D Quarters,No:P-2, Opp: A.P.J. Azad school,<br>Near Zilla Panchayath Office, Fort Bellary. | Cultural |
| 10 | Kum. Tulasi Hegde,<br>D/O Raghavendra S Hegde,<br>Raghavendra BettaKoppa, Nammane, Kanagod,<br>Sirsi, Uttara kannada . | Cultural |
| 11 | Kum. Sai Sinchana. H.M.,<br>D/O H.R Manjunath,<br>Near Marikamba Temple,<br>2nd Cross, Chilakadri Halli, Harige,<br>Vidyanagar, Shimoga | Cultural |
| 12 | Kum. Advita Mahadev Badiger,<br>D/o Mahadev.S Badiger. C/o .P.J Badiger,<br>"Anugraha Building" Banker's Colony,<br>Behind Old KHB Colony, Solapur Road,<br>Vijayapura-586 103. | Other Talent |
| 13 | Kum. Seema Ningappa Shettar,<br>D/O Ningappa Shettar,<br>Near Government Hospital, Indiranagar, Karatagi,<br>Koppal. | Innovation |
| 14 | Kum. Shravya. P.,<br>D/O. Parameshwara. Y.V.,<br>Chikkanahalli, Kallambella(Ho),<br>Sira Taluq, Tumkur-572 125. | Innovation |
| 15 | Kum. Maithri M Bairy<br>"Madhura", 5/297/A3, AK Nagar, Manipal,<br>Udupi-576104. | Scholastic |
| 16 | Mast. Ameya Atul Yalgi,<br>H.No.540/50/1, Wada Compound, Anagola<br>Belagavi- 590007 | Scholastic |

| | | |
|---|---|---|
| 17 | Mast. Rithin P.B.,<br>Shakthi Egg Center, Opp- Umashankar Stores,<br>M.H Road, Chitradurga. | Scholastic |

Exceptional achievement in Roller Skating

| | |
|---|---|
| 1 | Om Swaroop Gowda Y<br><br>No.322, 5th Main, 19th Cross, 1st Stage,<br><br>BEML Layout, Basaveshwara Nagara, Bengaluru-560079 |

Approximately 10000 to 15000 children are expected to participate and enjoy the programme on these two days along with their parents.
Entry is free for children and general public.
Free entry is also provided at Venkatappa Art Gallery and Government Aquarium.
Special BMTC buses have been arranged to and from the venue for the children and parents travelling from Bangalore Urban and Rural areas.
Traffic is restricted inside Cubbon Park on 13th & 14th of November 2016

# ವಿಶ್ವ ದೃಷ್ಟಿ ದಿನಾಚರಣೆ –

## ಕಣ್ಣಿನ ರೋಗಳ ತಡೆಗಟ್ಟುವಿಕೆ ಹಾಗೂ ನಿಯಂತ್ರಣಕ್ಕೆ ಹೆಚ್ಚಿನ ಒತ್ತು

ಬೆಂಗಳೂರು, ನವೆಂಬರ್ 11 (ಕರ್ನಾಟಕ ವಾರ್ತೆ)

ಪ್ರತಿ ವರ್ಷ ವಿಶ್ವದ್ಯಾಂತ ವಿಶ್ವ ದೃಷ್ಟಿ ದಿನಾಚರಣೆ ಹಾಗೂ ನವೆಂಬರ್ 14 ರಂದು ವಿಶ್ವ ಮಧುಮೇಹ ದಿನವನ್ನು ಆಚರಿಸಲಾಗುತ್ತಿದೆ. ದೃಷ್ಟಿಯು ಮಾನವನ ಅತ್ಯಾಮೂಲ್ಯವಾದ ಸಂಪತ್ತು. ಈ ನಿಟ್ಟಿನಲ್ಲಿ ಭಾರತ ಸರ್ಕಾರ ವಿಶ್ವ ದೃಷ್ಟಿ ದಿನಾಚರಣೆ ಅಂಗವಾಗಿ ಒಂದು ಮುಖ್ಯ ಉದ್ದೇಶದಿಂದ ಘೋಷಣೆಯೊಂದಿಗೆ, "ಪ್ರಬಲವಾಗುತ್ತಿರುವ ಕಣ್ಣಿನ ರೋಗಗಳ ತಡೆಗಟ್ಟುವಿಕೆ ಹಾಗೂ ನಿಯಂತ್ರಣದ" ಮೇಲೆ ಒತ್ತು ನೀಡಲಾಗುತ್ತಿದೆ. ಇದರ ಬಗ್ಗೆ ಹೆಚ್ಚಿಗೆ ಗಮನ ನೀಡುವುದು ಆದ್ಯ ಕರ್ತವ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಸರ್ಕಾರ ಹಾಗೂ ಲಯನ್ಸ್ ಕ್ಲಬ್ ಇಂಟರ್ ನ್ಯಾಷನಲ್ ಜಿಲ್ಲಾ 317 ಎ ಇವರ ಸಹಕಾರದೊಂದಿಗೆ ಜಾಥಾ ಹಮ್ಮಿಕೊಳ್ಳಲಾಗಿದೆ. ಇದರ ಮುಖ್ಯ ಉದ್ದೇಶ ಸಾರ್ವಜನಿಕರಲ್ಲಿ ಅಂಧತ್ವ ನಿಯಂತ್ರಣ ಮಾಡಲು ತೆಗೆದುಕೊಳ್ಳಬಹುದಾದ ಕ್ರಮಗಳು ಹಾಗೂ ಸರ್ಕಾರದಿಂದ ದೊರೆಯುವ ಉಚಿತ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಭಾರತದಲ್ಲಿ 120 ಲಕ್ಷ ಜನರು ಅಂಧತ್ವದಿಂದ ಬಳಲುತ್ತಿದ್ದಾರೆ. ಕರ್ನಾಟಕದಲ್ಲಿ ಸುಮಾರು 6 ಲಕ್ಷ ಅಂಧರಿದ್ದು ಇದರಲ್ಲಿ ಸುಮಾರು 4 ಲಕ್ಷ ಕಣ್ಣಿನ ಪೊರೆಯಿಂದ ದೃಷ್ಟಿ ಹೀನರಾಗಿದ್ದಾರೆ. ಇವರಿಗೆ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಿದಲ್ಲಿ ಸಂಪೂರ್ಣವಾಗಿ ದೃಷ್ಟಿ ಮರಳಿ ಪಡೆಯಬಹುದು. ಡಯಾಬಿಟಿಕ್ ರೆಟಿನೋಪತಿ ಖಾಯಿಲೆಯಿಂದ ಬಳಲುತ್ತಿರುವವರು ಸುಮಾರು 40 ಸಾವಿರ ಜನ, 40 ಸಾವಿನ ಜನ ಗ್ಲಾಕೋಮ ಖಾಯಿಲೆಯಿಂದ ಬಳಲುತ್ತಿದ್ದಾರೆ. 10 ಸಾವಿರ ಜನ ಕಾರ್ನಿಯ ಅಂಧತ್ವದಿಂದ ಬಳಲುತ್ತಿದ್ದಾರೆಂದು ಅಂದಾಜು ಮಾಡಲಾಗಿದೆ. ಸುಮಾರು 60 ಸಾವಿರ ಜನ ಸರಿಪಡಿಸಲಾಗಿದ ದೃಷ್ಟಿ ದೋಷದಿಂದ ಬಳಲುತ್ತಿದ್ದಾರೆ.

ಸಾರ್ವಜನಿಕರಲ್ಲಿ ಅಂಧತ್ವ ನಿಯಂತ್ರಣ ಮಾಡಲು ತೆಗೆದುಕೊಳ್ಳಬಹುದಾದ ಕ್ರಮಗಳೂ ಹಾಗೂ ಸರ್ಕಾರದಿಂದ ದೊರೆಯುವ ಉಚಿತ ಸೌಲಭ್ಯಗಳು:

1. ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಮತ್ತು ಲೆನ್ಸ್ ಅಳವಡಿಕೆಯಿಂದ ಸಂಪೂರ್ಣವಾಗಿ ದೃಷ್ಟಿ ಪಡೆಯಬಹುದು.
2. 40 ವರ್ಷಕ್ಕೆ ಮೇಲ್ಪಟ್ಟವರು ಕಣ್ಣುಗಳ ಒತ್ತಡವನ್ನು ಪರೀಕ್ಷಿಸಿಕೊಂಡು ಗ್ಲಾಕೋಮ ಖಾಯಿಲೆ ಪತ್ರೆ ಹಚ್ಚಿ ಚಿಕಿತ್ಸೆ ಪಡೆಯಿರಿ.
3. ಶಾಲಾ ಮಕ್ಕಳಲ್ಲಿ ಕಣ್ಣು ಪರೀಕ್ಷೆ ಮಾಡಿಸಿ ದೃಷ್ಟಿದೋಷವಿದ್ದಲ್ಲಿ ಸೂಕ್ತ ಕನ್ನಡಕ ಧರಿಸುವುದು.
4. ಹಬ್ಬ ಹರಿದಿನಗಳಲ್ಲಿ ಪಟಾಕಿ ಹಚ್ಚುವಾಗ ಕಣ್ಣಿನ ಬಗ್ಗೆ ಸೂಕ್ತ ಕಾಳಜಿವಹಿಸುವುದು.
5. ಕಣ್ಣಿಗೆ ಗಾಯ ಧೂಳು ಬಿದ್ದಲ್ಲಿ ಶುದ್ದವಾದ ನೀರಿನಿಂದ ಕಣ್ಣು ತಗೊಳೆಗೆ ಸಮೀಪದಲ್ಲಿರುವ ನೇತ್ರ ತಜ್ಞರಿಂದ ಸಲಹೆ ಮತ್ತು ಸೂಚನೆ ಪಡೆಯಿರಿ.
6. ಇತ್ತೀಚಿನ ದಿನಗಳಲ್ಲಿ ಜನ ಸಾಮಾನ್ಯರಲ್ಲಿ ಮಧುಮೇಹ (ಡಯಾಬಿಟಿಸ್) ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಳ್ಳುತ್ತಿದ್ದು, ಡಯಾಬಿಟಿಸ್ ಇರುವವರಿಗೆ ಕಣ್ಣಿನ ಅಕ್ಷಿಪಟಲದಲ್ಲಿ ಡಯಾಬಿಡಿಕ್ ರೆಟಿನೋಪತಿ ಆಗಿ ಸಂಪೂರ್ಣವಾಗಿ ದೃಷ್ಟಿಹೀನರಾಗುವ ಸಾಧ್ಯತೆ ಇರುತ್ತದೆ. ಆದುದರಿಂದ ಡಯಾಬಿಡಿಸ್ ಇದೆ ಎಂದು

ಪತ್ತೆ ಹಚ್ಚಿದ ತಕ್ಷಣ ತಮ್ಮ ಕಣ್ಣುಗಳನ್ನು ನೇತ್ರ ತಜ್ಞರುಗಳಿಂದ ಕಾಲಕಾಲಕ್ಕೆ ಪರೀಕ್ಷೆ ಮಾಡಿಸಿಕೊಂಡು ಸಲಹೆಯನ್ನು ಪಾಲಿಸಬೇಕೆಂದು ತಿಳಿಸಲಾಗಿದೆ.

ದಿನಾಂಕ: 14–11–2016 ವಿಶ್ವ ಮಧುಮೇಹ ದಿನ ಅಂಗವಾಗಿ ಬೃಹತ್ ಡಯಾಬಿಟಿಕ್ ರೆಟಿನೋಪತಿ ತಪಾಸನಾ ಶಿಬಿರವನ್ನು ಮಿಂಟೋ ಕಣ್ಣಾಸ್ಪತ್ರೆಯಲ್ಲಿ ಆಯೋಜಿಸಿದೆ. ಡಯಾಬಿಟಿಸ್ ಖಾಯಿಲೆ ಇರುವವರು ಇದರ ಸದುಪಯೋಗವನ್ನು ಪಡೆದುಕೊಳ್ಳಲು ತಿಳಿಸಿದೆ.

ಇಂತಹ ಕಾರ್ಯಕ್ರಮಗಳನ್ನು ಸರ್ಕಾರ, ಲಯನ್ಸ್ ಕ್ಲಬ್ ಸಂಸ್ಥೆ ಹಾಗೂ ಇನ್ನಿತರೇ ಸ್ವಯಂ ಸೇವಾ ಸಂಸ್ಥೆಗಳ ಸಹಕಾರದಿಂದ ಶಿಬಿರಗಳನ್ನು ಆಯೋಜಿಸಿ ಸಾರ್ವಜನಿಕರು ತಪಾಸಣಾ ಮಾಡಿಸಿಕೊಂಡು ಸೂಕ್ತ ಚಿಕಿತ್ಸೆ ಪಡೆಯಬಹುದಾಗಿದೆ.

## ಸಹಕಾರ ರತ್ನ ಪ್ರಶಸ್ತಿ ಪ್ರಕಟ

ಬೆಂಗಳೂರು, ನವೆಂಬರ್ 11 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯದಲ್ಲಿ ಸಹಕಾರ ಚಳವಳಿಯಲ್ಲಿ ಸಕ್ರೀಯವಾಗಿ ಪಾಲ್ಗೊಂಡು ವಿಶಿಷ್ಟ ಸೇವೆ ಸಲ್ಲಿಸಿ, ಸಹಕಾರ ಸಂಘ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ ಶ್ರೇಷ್ಠ ಸಹಕಾರಿಗಳನ್ನು ಗುರುತಿಸಿ ನೀಡಲಾಗುವ 2016ನೇ ವರ್ಷದ **"ಸಹಕಾರ ರತ್ನ"** ಪ್ರಶಸ್ತಿಗೆ ಈ ಕೆಳಕಂಡ 7 ಜನರನ್ನು ಆಯ್ಕೆ ಸಮಿತಿಯು ಆಯ್ಕೆ ಮಾಡಿದ್ದು, ಅವರಿಗೆ ನವೆಂಬರ್ 14 ರಂದು ಕೊಪ್ಪಳದಲ್ಲಿ ನಡೆಯುವ ಸಹಕಾರ ಸಪ್ತಾಹದ ಉದ್ಘಾಟನಾ ಸಮಾರಂಭದಲ್ಲಿ **ಸಹಕಾರ ರತ್ನ ಪ್ರಶಸ್ತಿ** ನೀಡಲಾಗುವುದು ಎಂದು ಸಹಕಾರ ಸಚಿವ ಹೆಚ್.ಎಸ್. ಮಹದೇವಪ್ರಸಾದ್ ತಿಳಿಸಿದ್ದಾರೆ.

**ಪ್ರಶಸ್ತಿ ವಿವರ**

| | |
|---|---|
| ಬೆಂಗಳೂರು ವಿಭಾಗ: | ಶ್ರೀ ಎಸ್.ಆರ್. ಲಕ್ಷ್ಮೀಕಾಂತ ರೆಡ್ಡಿ, ಚಿತ್ರದುರ್ಗ |
| ಬೆಂಗಳೂರು ನಗರ: | ಶ್ರೀ ಹೊ. ಶ್ರೀನಿವಾಸಯ್ಯ, ಬೆಂಗಳೂರು |
| ಮೈಸೂರು ವಿಭಾಗ: | ಶ್ರೀಮತಿ ಮೋಟಮ್ಮ, ಚಿಕ್ಕಮಗಳೂರು |
| | ಶ್ರೀ ಕೆ. ಅಮರನಾಥ್ ಶೆಟ್ಟಿ, ದಕ್ಷಿಣ ಕನ್ನಡ (ಮಂಗಳೂರು) |
| ಬೆಳಗಾವಿ ವಿಭಾಗ: | ಶ್ರೀ ಶಿವನಗೌಡ ಎಸ್. ಬಿರಾದಾರ, ವಿಜಯಪುರ |
| ಗುಲ್ಬರ್ಗಾ ವಿಭಾಗ: | ಶ್ರೀ ಟಿ.ಎಂ. ಚಂದ್ರಶೇಖರಯ್ಯ ಸ್ವಾಮಿ, ಬಳ್ಳಾರಿ |
| ಸಹಕಾರ ಇಲಾಖೆಯಿಂದ | |

ನಿವೃತ್ತ ಅಧಿಕಾರಿ: ಶ್ರೀ ಎಂ.ಎನ್. ಅಶ್ವತ್ಥನಾರಾಯಣ

**ಅಖಿಲ ಭಾರತ ಸಹಕಾರ ಸಪ್ತಾಹದ ಕುರಿತು**

ಸಹಕಾರ ಕ್ಷೇತ್ರದ ಸಾಧನೆಯನ್ನು ಜನಸಾಮಾನ್ಯರಿಗೆ ಪರಿಚಯಿಸುವ ಹಿನ್ನೆಲೆಯಲ್ಲಿ ಕಳೆದ 62 ವರ್ಷಗಳಿಂದ ಪ್ರತಿವರ್ಷ ರಾಷ್ಟ್ರದಾದ್ಯಂತ ಸಹಕಾರ ಸಪ್ತಾಹದ ಆಚರಣೆ ನಡೆದುಬಂದಿದೆ. ಈ ಬಾರಿ ನವೆಂಬರ್ 14 ರಿಂದ 20 ರವರೆಗೆ 63ನೇ ಅಖಿಲ ಭಾರತ ಸಹಕಾರ ಸಪ್ತಾಹ ನಡೆಯಲಿದೆ. ಸಪ್ತಾಹದ ಅವಧಿಯಲ್ಲಿ ಸಭೆ, ಸಮ್ಮೇಳನ ವಿಚಾರಗೋಷ್ಠಿಗಳು ನಡೆದು ಚಳವಳಿಯ ಸಾಧನೆಯ ಪರಾಮರ್ಶೆ ನಡೆಸಿ ಮುಂದಿನ ವರ್ಷಕ್ಕೆ ಗುರಿಯನ್ನು ಹಾಕಿಕೊಳ್ಳಲಾಗಿದೆ.

ಭಾರತದ ಪ್ರಥಮ ಪ್ರಧಾನಿ ಪಂಡಿತ್ ಜವಹರಲಾಲ್ ನೆಹರೂರವರು ಸಹಕಾರ ಕ್ಷೇತ್ರಕ್ಕೆ ವಿಶೇಷ ಪ್ರೋತ್ಸಾಹ ನೀಡುತ್ತಿದ್ದುದನ್ನು ಕೃತಜ್ಞತೆಯಿಂದ ಸ್ಮರಿಸುವ ಸಲುವಾಗಿ ಸಪ್ತಾಹವನ್ನು ನೆಹರೂರವರ ಹುಟ್ಟು ಹಬ್ಬವಾದ ನವೆಂಬರ್ 14 ರಿಂದ ಆರಂಭಿಸಲಾಗುತ್ತದೆ.

ಕರ್ನಾಟಕದಲ್ಲಿ ಎಲ್ಲಾ ಸಹಕಾರಿ ಸಂಘ ಸಂಸ್ಥೆಗಳು ಸಪ್ತಾಹದ ಆಚರಣೆಗೆ ಸಿದ್ಧತೆ ನಡೆಸಿವೆ. ಈ ಬಾರಿಯ ಸಪ್ತಾಹದ ಧ್ಯೇಯ "ಸುಸ್ಥಿರ ಅಭಿವೃದ್ಧಿ ಮತ್ತು ಬೆಳವಣಿಗೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ" ಎಂಬುದಾಗಿದೆ.

**ರಾಜ್ಯದಲ್ಲಿ ಸಪ್ತಾಹದ ಆಚರಣೆ**

ನವೆಂಬರ್ 14 ರಿಂದ 20 ರವರೆಗೆ ಈ ಕೆಳಕಂಡಂತೆ ಹಾಗೂ ಸ್ಥಳಗಳಲ್ಲಿ ಸಪ್ತಾಹದ ಆಚರಣೆ ನಡೆಯಲಿದೆ.

| ದಿನಾಂಕ | ವಿಷಯ | ಆಚರಿಸುವ ಸ್ಥಳ |
|---|---|---|
| 14.11.2016<br>ಸೋಮವಾರ | ಶಿಕ್ಷಣ ಮತ್ತು ತರಬೇತಿಯ ಮೂಲಕ ಸಹಕಾರ ಸಂಘಗಳನ್ನು ಬಲಪಡಿಸುವುದು<br>Empowerment of co-operatives through education and training. | ಕೊಪ್ಪಳ |
| 15.11.2016<br>ಮಂಗಳವಾರ | ಸಹಕಾರ ಸಂಘಗಳ ಮೂಲಕ ಕೌಶಲ್ಯ ಮತ್ತು ಉದ್ಯಮ ಶೀಲತೆಯನ್ನು ಅಭಿವೃದ್ಧಿಪಡಿಸುವುದು.<br>Skill and entrepreneurship development through co-operatives | ಧಾರವಾಡ |
| 16.11.2016<br>ಬುಧವಾರ | ಸಹಕಾರ ಸಂಘಗಳ ಮೂಲಕ ಆರ್ಥಿಕ ಸೇರ್ಪಡೆ<br>Financial inclusion through co-operatives | ರಾಮನಗರ |
| 17.11.2016<br>ಗುರುವಾರ | ಸಹಕಾರ ಸಂಸ್ಥೆಗಳ ಮೂಲಕ ಸರ್ಕಾರದ ವಿಶಿಷ್ಟ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು.<br>Implementation of flagship government schemes | ಬೆಂಗಳೂರು |

| | | |
|---|---|---|
| | and programmes through co-operatives | |
| 18.11.2016<br>ಶುಕ್ರವಾರ | ಸಹಕಾರ ಸಂಘಗಳ ಮೂಲಕ ಯುವಕರು, ಮಹಿಳೆಯರು ಮತ್ತು ದುರ್ಬಲ ವರ್ಗಗಳನ್ನು ಬಲಪಡಿಸುವುದು.<br>Empowerment of Youth, Women and Weaker sections through co-operatives | ಮಂಗಳೂರು |
| 19.11.2016<br>ಶನಿವಾರ | ಸಹಕಾರ ಸಂಘಗಳು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು.<br>Technology adoption by co-operatives | ಮಂಡ್ಯ |
| 20.11.2016<br>ಭಾನುವಾರ | ಸಹಕಾರ ಸಂಘಗಳ ಮೂಲಕ ಉತ್ತಮ ಆಡಳಿತ, ಮೌಲ್ಯಗಳು ಮತ್ತು ನಾಯಕತ್ವವನ್ನು ಬೆಳೆಸುವುದು.<br>Good governance, values and leadership through co-operatives | ಬೆಳಗಾವಿ |